## 65

# “ಪೌಲನೇ, ನೀನು ಏನು ಮಾಡಿದ್ದು?”

# (21:17-26)

ನಾವು ಈಗ ಅಪೊಸ್ತಲರ ಕೃತ್ಯಗಳು ಒಂದು ಗಾಬರಿ ಪಡಿಸುವ ವಾಕ್ಯ ಭಾಗವನ್ನು ನೋಡಲಿದ್ದೇವೆ: ಪೌಲನು ಪಾಪ ಶುದ್ಧಿಗಾಗಿ ಯೆರೂಸಲೇಮಿನ ದೇವಾಲಯಕ್ಕೆ ಹೋದನು (21:17-26). ಪೌಲನು ಈಗಾಗಲೇ ಗಲಾತ್ಯದವರಿಗೆ[1] ಬರೆದು “ಹೀಗಿರಲಾಗಿ ಧರ್ಮಶಾಸ್ತ್ರವು ನಮ್ಮನ್ನು ಕಾಯುವ ಆಳಿನಂತಾಗಿದೆ: ನಾವು ನಂಬಿಕೆಯಿಂದ ನೀತಿವಂತರೆಂಬ ನಿರ್ಣಯವನ್ನು ಹೊಂದುವದಕ್ಕಾಗಿ ಕ್ರಿಸ್ತನಲ್ಲಿಗೆ ಸೇರುವ ತನಕ ಅದು ನಮ್ಮನ್ನು ಕಾಯುತ್ತದೆ” (ಗಲಾತ್ಯ 3:24, 25) ಅವನುರೋಮಾಯರಿಗೆ[2] ಬರೆಯುವಾಗ:

> ಹಾಗೆಯೇ ನನ್ನ ಸಹೋದರರೇ, ನೀವು ಸಹ ಕ್ರಿಸ್ತನ ದೇಹದ ಮೂಲಕವಾಗಿ ಧರ್ಮಶಾಸ್ತ್ರದ ಪಾಲಿಗೆ ಸತ್ತಿರಿ. ದೇವರಿಗೆ ಫಲವಾಗುವದಕ್ಕಾಗಿ ಮತ್ತೊಬ್ಬನನ್ನು ಅಂದರೆ ಸತ್ತು ಜೀವಿತನಾಗಿ ಎದ್ದಾತನನ್ನು ಸೇರಿ ಕೊಂಡಿರಿ (ರೋಮಾಪುರ 7:4).

> ನಂಬುವವರಿರೆಲ್ಲರಿಗೆ ನೀತಿಯನ್ನು ದೊರಕಿಸಿರುವ ಕ್ರಿಸ್ತನಿಂದಲೇ ಕರ್ಮಮಾರ್ಗಕ್ಕೆ ಅಂತ್ಯವಾಯಿತು (ರೋಮಾಪುರ 10:4).

ಕ್ರೈಸ್ತರು ಇನ್ನೆಂದಿಗೂ ಧರ್ಮಶಾಸ್ತ್ರಕ್ಕೆ ಅಧೀನರಲ್ಲ ಎಂದು ಬರೆದ ವ್ಯಕ್ತಿ, “ಕ್ರಿಸ್ತನ ದೇಹದಲ್ಲಿ ಅವರು ಧರ್ಮಶಾಸ್ತ್ರಕ್ಕೆ ಸತ್ತವರು” (KJV), ಕ್ರಿಸ್ತನು ಧರ್ಮಶಾಸ್ತ್ರದ ಅಂತ್ಯ ಎಂದು ತಿಳಿಸಿದವನು ಹೇಗೆ ಯೆರೂಸಲೇಮಿನ ಕಳ್ಳರ ಗವಿಯಾದ ದೇವಾಲಯಕ್ಕೆ ಹೋಗಿ ಎಂಟು ವಿಧವಾದ ಸಮರ್ಪಣೆಗಳನ್ನು[3] ಮಾಡಲು ಸಾಧ್ಯವಾಯಿತು (ಮತ್ತಾಯ 21:13; KJV)? ನಮ್ಮ ಈ ನಕರಾತ್ಮಕವಾದ ಅನಿಸಿಕೆಗಾಗಿ, ವಿವರಣೆಕಾರರಾದ ಆಡಮ್ ಕ್ಲಾರ್ಕ್‌ರವರು:

> ಈ ವಿಷಯವನ್ನು ನಾವು ಯಾವ ರೀತಿಯಲ್ಲಾದರೂ ಆಲೋಚಿಸಬಹುದು, ಯಾಕೋಬ, ಪೌಲ ಮತ್ತು ಇತರರ ಕ್ರಿಯೆಯ ಕುರಿತು ಯಾವುದೇ ವಿವರಣೆಯನ್ನು ನೀಡಲು ಸಾಧ್ಯವಿಲ್ಲ. ಇದರಲ್ಲಿರುವ ಆಳವಾದ ವಿಷಯವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.[4]

ಇದರ ಕುರಿತಾಗಿ ಒಬ್ಬ ಪಂಡಿತನು ಅದರಲ್ಲಿ ಅಡಗಿರುವ ಇಂಗಿತವನ್ನು ಬಯಲು ಮಾಡಿರುವನು:

> ಕ್ಯಾಲ್ವಿನನು ಮರಣದ ಹಾಸಿಗೆಯಲ್ಲಿರುವಾಗ, ದೇವರ ಪರಿಶುದ್ಧ ತಾಯಿಗೆ[5] ಬಂಗಾರದ ಉಡುಗೆಯನ್ನು ನೀಡಲು ನಿರ್ಧರಿಸಿದನು, ರೋಮಾ ಹಾಗೂ ಗಲಾತ್ಯದ ಬರಹಗಾರನು ದೇವಾಲಯದ ಹೊರಾಂಗಣದಲ್ಲಿ ಏಳು ದಿವಸಗಳ ಕಾಲ ನಿಂತುಕೊಂಡಾಗ, ಅಲ್ಲಿದ್ದ ಬೋಧಕರ ಸಕಲ ನಿಯಮಗಳು ಅವನ ಹರಕೆಯ ಸುತ್ತಲೂ ಹೆಣೆದುಕೊಂಡಿದ್ದವು. ದೇವ ನಂಬಿಕೆಯಿಲ್ಲದ ಯಾಜಕರ ಹಾಗೂ ಲೇವಿಯರ ಆ ದಿನಗಳ ಅರ್ಥವಿಲ್ಲದ ಕ್ರೈಸ್ತ ಪೂಜಾ ನಿಯಮಗಳನ್ನು ಅವನು ಪಾಲಿಸುವಂತೆ ಮಾಡಿದರು.[6]

ಅಪೊಸ್ತಲ ಕೃತ್ಯದ ಪ್ರಾಮಾಣಿಕತೆ ಹಾಗೂ ಪ್ರೇರಣೆಯನ್ನು ನಂಬುವವರಾದ ಅನೇಕ

ರಾದ ನಾವುಗಳು ಅಪೊಸ್ತಲರ ಕೃತ್ಯಗಳು 21:17-26ರ ಸಮಸ್ಯೆಯಿಂದ ತಪ್ಪಿಸಿಕೊಳ್ಳಲ್ಲು ಸಾಧ್ಯವಿಲ್ಲ. ಅದರಲ್ಲಿರುವ ನಡೆದ ಘಟನೆಯನ್ನು ನಿರಾಕರಿಸುವ ಹಾಗೆ ಇರುವದಿಲ್ಲ. ಪೌಲನು ಮಾಡಿದ ಈ ಕೃತ್ಯದ ನಿಮಿತ್ತ ಪರಿತಪಿಸಬೇಕು ಹಾಗೂ ಅದನ್ನು ಏಕೆ ಮಾಡಿದನು ಎಂದು ತಿಳಿಯಬೇಕು. G. ಕ್ಯಾಂಬೆಲ್ ಮಾರ್ಗನ್[7] ರವರು ಪೌಲನ ಈ ಕಾರ್ಯಕ್ಕೆ ಪರವಾಗಿ ಬರೆದಿರುವರು: "ಈ ಸನ್ನಿವೇಶದಲ್ಲಿ ಪೌಲನು ಒಂದು ದೊಡ್ಡ ತಪ್ಪನ್ನು ಮಾಡಿರುವನು." ಇನ್ನೊಂದು ವಿಧದಲ್ಲಿ, ಪೌಲನ ವರ್ತನೆಯು ಅತಿ ಮಹತ್ವವೂ ಆಗಿದೆ, ಅವನು ಬೋಧಿಸಿದ ನಿಯಮಗಳಿಗನುಸಾರವಾದ ಅನುರೂಪವಾಗಿದೆ.

ಲೂಕನು ತಾನೇ ಪೌಲನ ಬಗ್ಗೆ ಹೇಳಿಕೆಯನ್ನಾಗಲೀ ಅಥವಾ ತೀರ್ಪನ್ನಾಗಲೀ ನೀಡದೆ ಇರುವದರಿಂದ ನಾವುಗಳು ಈ ಕುರಿತು ಹಟದ ನಿರ್ಣಯವನ್ನು[8] ಮಾಡಲು ಸಾಧ್ಯವಿಲ್ಲ. ಅದರಲ್ಲಿ ಗುಣಾತ್ಮಕ ಬೆಲೆಯು ಇರಬಹುದು. ಆ ವಾಕ್ಯವನ್ನು ಅರ್ಥಮಾಡಿಕೊಳ್ಳುವದರಿಂದ ನಮ್ಮ ಜೀವಿತಕ್ಕೆ ಕೆಲವು ನಿಯಮಗಳು ದೊರಕಬಹುದು. ಈ ಪಾಠದಲ್ಲಿ ಪೌಲನು ಮಾಡಿದ್ದನ್ನು ಸ್ಪಷ್ಟವಾಗಿ ತಿಳಿದು, ಮುಂದಿನ ಪಾಠದಲ್ಲಿ ಅದನ್ನು ಏಕೆ ಮಾಡಿದನು ಎಂಬ ವಿಚಾರವನ್ನು ಚರ್ಚೆಮಾಡೋಣ.

## ಒಂದು ತೃಪ್ತಿಕರವಾದ ಸತ್ಕಾರ (21:17, 18)

ಪಂಚಾಶತ್ತಮ ಹಬ್ಬದ ಹಿಂದಿನ ದಿನ ಪೌಲ ಮತ್ತು ಅವನ ಸಂಗಡಿಗರು ಯೆರೂಸಲೇಮಿಗೆ ಬಂದರು ಎಂದು ನಮ್ಮ ಪಾಠ ಆರಂಭವಾಗುತ್ತದೆ.[9] ಲೂಕನು ಬರೆದು, "ನಾವು ಯೆರೂಸಲೇಮಿಗೆ ಬಂದಾಗ ಸಹೋದರರು ನಮ್ಮನ್ನು ಸಂತೋಷದಿಂದ ಸೇರಿಸಿ, ಕೊಂಡರು" (ವಚನ 17). "ನಾವು" ಎಂದರೆ ಲೂಕನು ತಿಮೊಥೆ ಹಾಗೂ ಇತರೆ ಆರು ಜನರು ಅವರಲ್ಲಿ ಸೇರಿರುವರು (20:4, 5). "ಸಹೋದರರು ಎಂದರೆ ಅವರಲ್ಲಿ ಮ್ನಾಸೋನನು, ಹಾಗೂ ಸ್ವಾಗತ ಮಂಡಳಿಯು ಇರಬಹುದು" (21:16). ಅವರೆಲ್ಲರು ಅವನ ಮನೆಯಲ್ಲಿ ಸೇರಿ ಬಂದಿರಬಹುದು.[10] ಅವರು ನೀಡಿದ ಸಂತೋಷಕರವಾದ ಸ್ವಾಗತವು ಪೌಲನ ಚಿಂತೆಯನ್ನು ಸ್ವಲ್ಪ ಮಟ್ಟಿಗೆ ಹಗುರ ಮಾಡಿರಬಹುದು (ರೋಮಾಪುರ 15:30, 31). NIVಯಲ್ಲಿ "ಸಹೋದರರು ಅವರನ್ನು ಉತ್ಸುಕತೆಯಿಂದ ಸ್ವಾಗತಿಸಿದರು" ಎಂಬುದಾಗಿದೆ.

ಮರುದಿನ ಪೌಲ ಮತ್ತು ಅವನ ಸಂಗಡಿಗರು ಯೆರೂಸಲೇಮಿನ ದೇವಾಲಯದ ಕೆಲವು ನಾಯಕರನ್ನು ಭೇಟಿಯಾಗುವ ಕಾರ್ಯಕ್ರಮವಿತ್ತು. ಅವರು ಯಾಕೋಬನ ಮನೆಯಲ್ಲಿ ಆ ಸಭೆಯನ್ನು ನಡೆಸಿದರು,[11] ಅವನು ಯೇಸುವಿನ ಸಹೋದರನಾಗಿದ್ದನು, ಮತ್ತು ಯೆರೂಸಲೇಮ್ ದೇವಾಲಯದ ಸ್ತಂಭವೆಂದು ಪರಿಗಣಿಸಲ್ಪಟ್ಟಿದ್ದನು (ಗಲಾತ್ಯ 2:9).[12] ವಚನ 18ರಲ್ಲಿ "ಮರುದಿನ ಪೌಲನು ನಮ್ಮನ್ನು ಕರೆದುಕೊಂಡು ಯಾಕೋಬನ ಬಳಿಗೆ ಹೋದನು,[13] ಸಭೆಯ ಹಿರಿಯರೆಲ್ಲರೂ ಸಹ ಬಂದರು."

"ಸಭೆಗೆ ಹಿರಿಯರೆಲ್ಲರು" ಎಂಬುದನ್ನು ಗಮನಿಸಿ. ಅಪೋಸ್ತಲರ ಕೃತ್ಯದಲ್ಲಿ, ತಾತ್ಕಲಿಕವಾದ ಅಪೊಸ್ತಲರ ನಾಯಕತ್ವದಿಂದ, ಹಿರಿಯರ - ನಿರಂತರಕಾಲದ ನಾಯಕತ್ವದ ಬದಲಾವಣೆಯನ್ನು ಗಮನಿಸಿರಿ. "ಅಪೊಸ್ತಲರ ಕುರಿತು" (2:42; 4:35, 37; 5:2; 8:1, 14; 9:27), ಮೊದಲಿಗೆ ನೋಡುತ್ತೇವೆ. ನಂತರ, "ಅಪೊಸ್ತಲರು ಹಾಗೂ ಹಿರಿಯರ ಕುರಿತು ನೋಡುತ್ತೇವೆ" (15:2, 4, 6, 22, 23; 16:4), ಈಗ ಕೇವಲ "ಹಿರಿಯರ" ಕುರಿತು ನೋಡುತ್ತೇವೆ (21:18; ನೋಡಿರಿ 14:23; 20:17). ಆದಿ ಸಭೆಯ ಹನ್ನೆರಡು ಜನ ಅಪೊಸ್ತಲರು, ಯೆರೂಸಲೇಮಿನಲ್ಲಿ ಇರಬಹುದು ಅಥವಾ ಇಲ್ಲದೆ ಇರಬಹುದು, ಅದನ್ನು ನಾವು ಅರಿಯೆವು. ಒಂದು ವೇಳೆ ಅವರು ಇತರೆ ಸ್ಥಳಗಳಲ್ಲಿ ಸುವಾರ್ತೆ ಸಾರಲು ಹೋಗಿರಬಹುದು, ಅದು ಅವರಿಗೆ ದೇವರ ನೇಮಕವಾಗಿತ್ತು (ಮತ್ತಾಯ 28:18; ಅಪೊಸ್ತಲರ ಕೃತ್ಯಗಳು 1:8).[14] ಹಾಗೂ ಸಭೆಯ ಉಸ್ತುವಾರಿಯನ್ನು ಹಿರಿಯರು ನೋಡಿಕೊಳ್ಳುತ್ತಿದ್ದರು.

"ಯಾಕೋಬನು ಮತ್ತು ಸಭಾ ಹಿರಿಯರು" ಎಂಬ ವ್ಯಾಖ್ಯಾನವನ್ನು ಗಮನಿಸಿರಿ, ಅದರಲ್ಲಿ ಯಾಕೋಬನು ಸಹ ಒಬ್ಬ ಹಿರಿಯನಾಗಿದ್ದನು ಎಂಬ ಅರ್ಥವಿರುವದಿಲ್ಲ. ಹಾಗೂ ಅವನು "ಸಭಾಧ್ಯಕ್ಷ"ನಾಗಿದ್ದನು ಎಂಬ ಸೂಚನೆಯೂ ಇರುವದಿಲ್ಲ,ಅವರು ಹಿರಿಯರ ಅಧಿಕಾರಕ್ಕೆ ಒಳಗಾಗಿದ್ದರು. ಹಾರ್ವೆಯವರು ಅಪೊಸ್ತಲರ ಕೃತ್ಯಗಳು 21:18ರ ವಿವರಣೆಯನ್ನು ನೀಡಿ:

> ಯಾಕೋಬನ ಹಿರಿಯರೊಂದಿಗೆ ಯೆರೂಸಲೇಮಿನ "ಸಭಾಧ್ಯಕ್ಷ" ನಾಗಿದ್ದನು ಎಂದು ಪೌಲನು ಅವನನ್ನು ಸಂಧಿಸದೆ ಸಭಾ ಮೂಲಕ್ಕೆ ಅಪೊಸ್ತಲರೇ ಕಾರಣ ಎಂಬ ಸಾಕ್ಷಿಯನ್ನು ನೀಡುತ್ತದೆ.[15]

ಚರ್ಚ್ ಆಫ್ ಇಂಗ್ಲೇಂಡಿನ ವಿವರಣೆಕಾರನು, ಹೊಸ ಒಡಂಬಡಿಕೆಯ ನಾಯಕತ್ವದ ಕುರಿತು ಸರಿಯಾದ ಗ್ರಹಿಕೆಯನ್ನು ಹೊಂದಿರಲಿಲ್ಲ ಎಂಬ ಸೂಚನೆಯಿದೆ. ನಾವು ಅಪೊಸ್ತಲರ ಕೃತ್ಯಗಳು 20:17, 28ನ್ನು ಅಭ್ಯಾಸ ಮಾಡಿದಾಗ "ಹಿರಿಯ" ಮತ್ತು "ಸಭಾಧ್ಯಕ್ಷ" ಎಂಬ ಪದಗಳನ್ನು ಸಮಾನಾಂತರವಾಗಿ ಬಳಸಲಾಗಿದೆ. ಹೊಸ ಒಡಂಬಡಿಕೆಯ ಆಡಳಿತ/ಕೆಲಸಕ್ಕೂ ಇದನ್ನು ಸಮಾನವಾಗಿ ಉಪಯೋಗಿಸಲಾಗಿದೆ. ಆದರೆ ಶ್ರಿಯುತ ಹಾರ್ವೆಯವರು ನೀಡಿದ ಅಪೊಸ್ತಲರ ಕೃತ್ಯಗಳು 21:18ರ ವಿವರಣೆಯು, ನಂತರದಲ್ಲಿ ವೃದ್ಧಿಗೊಂಡಿತು.

ಇಲ್ಲಿ ಲೂಕನು ಯಾಕೋಬನಿಗೂ ಮತ್ತು ಹಿರಿಯರಿಗೂ ನಡುವೆ ಇರುವ ವ್ಯತ್ಯಾಸವನ್ನು ನೀಡುತ್ತಿಲ್ಲ ಎಂಬುದನ್ನು ನಾನು ಖಚಿತ ಪಡಿಸುತ್ತೇನೆ.[16] ಒಂದು ವೇಳೆ ನಾನೇ ಅದನ್ನು ಬರೆದಿರುವದಾದರೆ, "ನಾನು ಒಬ್ಬ ಹಿರಿಯನ ಮನೆಗೆ ಹೋದೆ, ಅಲ್ಲಿ ಎಲ್ಲಾ ಹಿರಿಯರು ಸೇರಿ ಬಂದಿದ್ದರು, ಅಂದರೆ ಮೊದಲನೆಯದಾಗಿ ತಿಳಿಸಿದ ಹಿರಿಯನು, ಎರಡನೆಯದಾಗಿ ತಿಳಿಸಲ್ಪಟ್ಟ ಹಿರಿಯರಿಗೆ ಸೇರಿದವನಲ್ಲ ಎಂಬ ಅರ್ಥವನ್ನು ನೀಡುವದಿಲ್ಲ." ಆದರೆ ಎಲ್ಲರೂ, ಒಬ್ಬ ಹಿರಿಯನ ಮನೆಯಲ್ಲಿ ಸೇರಿ ಬಂದರು ಎಂದು ನೀವು ನಿರ್ಣಯಿಸುವದಿಲ್ಲವೇ. ಅಪೊಸ್ತಲರ ಕೃತ್ಯಗಳು 21:8ರ ಕಾರ್ಯ ಇದೇ ಆಗಿರುತ್ತದೆ. ಮಾರ್ಕ್ ಬ್ಲಾಕ್‌ರವರು ಹೇಳಿದಂತೆ, "ಯಾಕೋಬ ಮತ್ತು ಇತರೆ ಹಿರಿಯರು" ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.[17]

ನಾನು ಇನ್ನೊಂದು ಅಪವಾದವನ್ನು ಕೇಳಿಸಿಕೊಂಡಿದ್ದೇನೆ: "ಯಾಕೋಬನು ಹಿರಿಯರಲ್ಲಿ ಒಬ್ಬನಾಗಿದ್ದರೆ, ಅವನ ಹೆಸರನ್ನು ಮಾತ್ರ ಏಕೆ ಉಲ್ಲೇಖಿಸಲಾಗಿದೆ?" ಯಾಕಂದರೆ ಅದು ಅವನ ಮನೆಯಾಗಿತ್ತು, ಮತ್ತು ಅವನು ಗೌರವಸ್ತನು, ಪ್ರಭಾವ ಶಾಲಿಯು ಆಗಿದ್ದನು. ಆದರೆ ಲೂಕನ ಮಾತುಗಳಲ್ಲಿ ಯಾಕೋಬನ ಕುರಿತು ಹಗುರವಾಗಿ ಮಾತನಾಡಿರುವದಿಲ್ಲ. ವಚನ 19 ರಿಂದ 25ರವರೆಗೆ ಹಿರಿಯರನ್ನು ಕುರಿತು ಗುಂಪು ನಾಮದಲ್ಲಿ (ಅವರು, "ಅವರಿಗೆ") ಮಾತನಾಡಲಾಗಿದೆ.

ಪೌಲನು, "ಸಕಲ ಹಿರಿಯರನ್ನು" ಸಂಧಿಸಿದನು ಎಂಬುದು ಲೂಕನ ತಾತ್ಪರ್ಯ ಒಂದು ಸಮಸ್ಯೆಯು ಪರಿಹಾರವಾಗುವವರೆಗೆ ಹಿರಿಯರು ಕೂಡಿ ಬರುವದು ಯೋಗ್ಯವಾದ ಕಾರ್ಯವಾಗಿದೆ.[18]

ಸಭೆಯ ಹಿರಿಯರೆಲ್ಲರು ಸೇರಿ ಬಂದನಂತರ, ಪೌಲನು ಅವರನ್ನು ಸರಳವಾಗಿ "ವಂದಿಸಿದನು" ಎಂದು ಪೌಲನು ತಿಳಿಸಿರುವನು (ವಚನ 19ಎ). ಲೂಕನು ಈ ವಿಷಯವನ್ನು ವಿಸ್ತಾರ ಮಾಡಲಿಲ್ಲ,[19] ಆದರೆ ಅದು ಮಹತ್ವದ ಸನ್ನಿವೇಶವಾಗಿತ್ತು. ಇದೇ ಮೊದಲ ಬಾರಿಗೆ ಯೆರೂಸಲೇಮಿನ ಹಿರಿಯರು, ಕ್ರೈಸ್ತರಾದ ಅನ್ಯರನ್ನು ತಮ್ಮ ಅನ್ಯೋನ್ಯತೆಗೆ ಅಂಗೀಕರಿಸಿ ಕೊಂಡರು. ಒಂದು ವೇಳೆ ಈ ಸಮಯದಲ್ಲಿಯೇ ಪೌಲ ಮತ್ತು ಅವನ ಸಂಗಡವಿದ್ದ ಕ್ರೈಸ್ತ ರಾದ ಅನ್ಯ ಸಹೋದರರು, ತಮ್ಮ ಕಾಣಿಕೆಗಳನ್ನು ಯೆಹೂದ್ಯ ಹಿರಿಯರ "ಪಾದಗಳಿಗೆ" ಸಮರ್ಪಿಸಿರಬಹುದು (4:35 ನೋಡಿರಿ). ಪೌಲನಿಗೆ ಪ್ರತಿಕ್ರಿಯಿಸಿದ ಹಿರಿಯರು (21:20) ಸಂತೋಷವಾಗಿ ಆ ಕಾಣಿಕೆಯನ್ನು ಸ್ವೀಕರಿಸಿರಬಹುದು.[20]

## ಚೈತನ್ಯಗೊಳಿಸುವ ಒಂದು ವರದಿ (21:19)

ಈಗ ಪೌಲನು "ತನ್ನ ಸೇವೆಯ ಮೂಲಕವಾಗಿ ದೇವರು ಅನ್ಯಜನರಲ್ಲಿ ಮಾಡಿದ್ದ ಕಾರ್ಯಗಳನ್ನು ಒಂದೊಂದಾಗಿ ವಿವರಿಸಿದನು" (ವಚನ 19ಬಿ). ಪೌಲನು ಅನ್ಯ ಜನರಲ್ಲಿ ಮಾಡಿದ ಕಾರ್ಯಗಳನ್ನು ಕ್ರಮವಾಗಿಯೂ, ನಿಧಾನವಾಗಿಯೂ ವಿವರಿಸಿದನು.[21] ಅವನ ಸಕಲ ಸಾಧನೆಗಳಿಂದಲೇ ದೇವರಿಗೆ ಮಹಿಮೆಯನ್ನು ಸಲ್ಲಿಸಿದನು.ಪೌಲನು ಇದನ್ನು ದೇವರ ಮಹಿಮೆಗಾಗಿಯೂ ಮತ್ತು ಅವನ ಸೇವೆಯು ದೇವರಿಂದ ಮಂಜೂರು ಆದದ್ದೆಂದು ದೃಢೀಕರಿಸಿದನು. ಯೆರೂಸಲೇಮಿನ ಹಿರಿಯರಿಗೆ ಇದೇ ಮೊದಲ ಬಾರಿಗೆ ಪೌಲನು ವರದಿಯನ್ನು ಸಲ್ಲಿಸಿರಲಿಲ್ಲ (15:4). ಆದರೆ ಈ ಸಮಯದಲ್ಲಿ ಅವನ ಸೇವೆಯಲ್ಲಿ ಉಂಟಾದ ಪ್ರತಿಫಲವಾದ ಯೌವನಸ್ಥ ಅನ್ಯ ಸಹೋದರರನ್ನು ತನ್ನೊಂದಿಗೆ ಕರೆತಂದಿದ್ದನು.

ಅವನು ನೀಡಿದ ಕಾಣಿಕೆ ಹಾಗೂ ವರದಿಯ, ಮುಖಾಂತರ ಪೌಲನ ಮೂರನೇ ಸೇವಾ ಪ್ರಯಾಣವು ಅಂತ್ಯಗೊಂಡಿತ್ತು. ಪೌಲನು ಹತ್ತು ವರ್ಷಗಳ ಕಾಲ ರೋಮಾಯದ ಪೂರ್ವಾರ್ಧಭಾಗದಲ್ಲಿ ಸಾವಿರಾರು ಮೈಲುಗಳ ಪ್ರಯಾಣ ಮಾಡಿ, ಪ್ರಮುಖ ಪಟ್ಟಣಗಳಲ್ಲಿ ಸಭೆಗಳನ್ನು ಸ್ಥಾಪಿಸಿದನು! ಅವನ ಮುಂದಿನ ಪ್ರಯಾಣ ಆರಂಭವಾಗುವವರಿಗೆ, ಇದು ಅತ್ಯುತ್ತಮ ಸೇವೆಯಾಗಿತ್ತು.

## ಒಂದು ದುಃಖದ ಪ್ರತಿಕ್ರಿಯೆ (21:20-22)

ಪೌಲನ ಈ ವರದಿಗೆ, ಹಿರಿಯರ ಪ್ರತಿಕ್ರಿಯೆಯು ಮೊದಲ ದೃಷ್ಟಿಗೆ ಆನಂದದಾಯಕ ವಾಗಿತ್ತು, ನಂತರ ಪೌಲನ ಹೃದಯಕ್ಕೆ ದುಃಖವುಂಟಾಯಿತು, "ಅವರು ಇದನ್ನು ಕೇಳಿ ದೇವರನ್ನು ಕೊಂಡಾಡಿದರು" (ವಚನ 20ಎ). ಅವರ ಪ್ರಾಥಮಿಕ ಪ್ರತಿಕ್ರಿಯೆಯಲ್ಲಿ ಅನೇಕ ಸಂಗತಿಗಳು ಅಡಕವಾಗಿವೆ. (1) ಪೌಲನ ಸೇವೆಯಲ್ಲಿ ಅವರು ದೇವರ ಹಸ್ತವನ್ನು ಕಂಡರು, ಮತ್ತು (2) ಪೌಲನನ್ನು ಹೊರತು ಪಡಿಸಿ, ದೇವರನ್ನೇ ಘನ ಪಡಿಸಿದರು. (3) ಅವರು ಘನ ಪಡಿಸುವದರಲ್ಲೇ ಮುಂದುವರೆದರು ಎಂಬ ವ್ಯಾಕರಣವಿದೆ. ಆಗ ಪೌಲ ಮತ್ತು ಅನ್ಯ ಸಹೋದರರು ರೋಮಾಂಚನಗೊಂಡರು; ಅವರ ಮುಖದಲ್ಲಿ ಮುಗುಳ್ನಗೆಯನ್ನು ನಾನು ಕಾಣುತ್ತೇನೆ.

ಹಿರಿಯರಿಂದ ಪೌಲನಿಗೆ ಉಂಟಾದ ಪದಗಳಲ್ಲಿ ಉತ್ತೇಜನವಿತ್ತು. "ಸಹೋದರನೇ," "ಯೆಹೂದ್ಯರಲ್ಲಿ ಯೇಸುವನ್ನು ನಂಬಿರುವವರು ಎಷ್ಟು ಸಾವಿರ[22] ಮಂದಿ ಇದ್ದಾರೆಂಬುದನ್ನು ನೋಡುತ್ತಿಯಲ್ಲಾ"[23] ಸಹೋದರನೇ ಎಂಬ ಹೇಳಿಕೆಯು ಉತ್ತಮ ಸಂಕೇತವಾಗಿದೆ (ವಚನ 20ಬಿ). ದೇವರು ಅನ್ಯರಲ್ಲಿ ಮಾತ್ರ ಕಾರ್ಯ ಮಾಡದೆ, ಆತನು ಯೆಹೂದ್ಯರಲ್ಲಿಯೂ ಕಾರ್ಯ ಮಾಡುತ್ತಿರುವನು ಎಂದು ಅವರು ಹೇಳಿದರು. ಪೌಲನು ತನ್ನ ಜನಾಂಗದವರಿಗೆ ತನ್ನ ಚಿಂತನೆಯ ಬಗ್ಗೆ ಬರೆದ ಅಲ್ಪ ಸಮಯದಲ್ಲಿ ಈ ಮಾತುಗಳು ಕೇಳಿಬಂದಿದ್ದವು (ರೋಮಾಪುರ 9:1-3). ಸಾವಿರಾರು ಯೆಹೂದ್ಯರು ಕ್ರೈಸ್ತರಾದರು ಎಂಬ ಮಾತು ಪೌಲನಿಗೆ ಹಿತವನ್ನು ತರಲಿಲ್ಲ.

ಹಿರಿಯರು ಗುಣಾತ್ಮಕವಾದ ಆಲೋಚನೆಯಿಂದ ಮಾತನಾಡದೆ ಇದ್ದದರಿಂದ - ಅವನು ಬಹಳ ಬೇಸರಗೊಂಡನು. ನಿಮ್ಮಲ್ಲಿ ಅನೇಕರ ಸ್ಥಿತಿಯು ಪೌಲನಂತೆಯೇ ಇರಬಹುದು. ನೀವು ತಿಳಿದಂತೆ, ನಿಮ್ಮ ಘನವಾದ ಕಾರ್ಯವನ್ನು ವರದಿಯನ್ನು ನೀವು ಮಾಡಿರಬಹುದು. ನಂತರ ನಿಮ್ಮ ಭರವಸೆಯು ಗುಣಾತ್ಮಕವಾಗಿ ಪ್ರತಿಕ್ರಿಯಿಸಿದಾಗ, ನಿಮಗೆ ಬೇಸರವಾಯಿತು. ಹಿರಿಯರು "ಆದರೆ" ಎಂಬ ಪದಪ್ರಯೋಗ ಮಾಡದಿದ್ದರು, ಅದರ ಸೂಚನೆಯುರಾರಾಜಿಸುತ್ತಿತ್ತು.[24]

ಹಿರಿಯರು ಮುಂದುವರೆಸಿ: "ಅವರೆಲ್ಲರೂ (ಸಾವಿರಾರು ಯೆಹೂದ್ಯ ಕ್ರೈಸ್ತರು) ಧರ್ಮಶಾಸ್ತ್ರದ ಅಭಿಮಾನಿಗಳಾಗಿದ್ದಾರೆ" (ವಚನ 20ಸಿ). ಆ ಪದಗಳಿಂದ ಪೌಲನಿಗೆ ಬೇಸರವಾಗಿರಬಹುದು. ಯಾಕಂದರೆ ಧರ್ಮಶಾಸ್ತ್ರದ ಅಭಿಮಾನ ಏನು ಎಂಬುದಾಗಿ ಅವನು

ಅರಿತ್ತಿದ್ದನು. ಅದರ ಬಗ್ಗೆ ಅವನು ಬಹಳ ಉತ್ತಮವಾಗಿ ಅರಿತ್ತಿದ್ದನು (ಗಲಾತ್ಯ 1:14; ಫಿಲಿಪ್ಪಿ 3:5-9). ಪರಿವರ್ತನೆಗೊಂಡ ಈ ಫರಿಸಾಯನು ಮತ್ತು ತೊಂದರೆ ಉಂಟುಮಾಡಿದವನು ಧರ್ಮಶಾಸ್ತ್ರದ ವಿಶೇಷ ಅಭಿಮಾನಿಯಾಗಿದ್ದನು (ಅಪೊಸ್ತಲರ ಕೃತ್ಯಗಳು 15:5). ಪೌಲನು ಆಶ್ಚರ್ಯಗೊಂಡನು, "ಈ ವಿಷಯಕ್ಕೂ ಮತ್ತು ನಾನು ಮಾಡುತ್ತಿರುವ ಅನ್ಯರ ಮಧ್ಯದ ಸೇವೆಗೂ, ಈ ಯೆರೂಸಲೇಮಿನ ಭೇಟಿಯು ಯಾವ ಸಂಬಂಧವನ್ನು ಹೊಂದಿದೆ ಎಂದು ಆಶ್ಚರ್ಯಪಟ್ಟಿರಬಹುದಲ್ಲವೇ?"

ಪೌಲನ ಕುರಿತಾಗಿ ಉಂಟಾಗಿದ್ದ ವದಂತಿಯನ್ನು ಆ ಹಿರಿಯರು ಕೇಳಲ್ಪಟ್ಟಿದ್ದರು. ವದಂತಿಗಳು ಕೆಟ್ಟ ಸಂಗತಿಗಳಾಗಿವೆ. ಶೇಕ್ಸ್‌ಫಿಯರ್ ಅದನ್ನು "ಸುಳ್ಳಿನ ಪಿಸುಮಾತು" ಎಂದು ಕರೆದಿರುವನು.[25] ಕುದುರೆಗಳನ್ನು ಸಾಕುವ ಒಬ್ಬನು ತನ್ನ ಒಂದು ಕುದುರೆಗೆ "ವದಂತಿ" ಎಂದು ಹೆಸರಿಟ್ಟನು. ಆ ವಿಶಿಷ್ಟ ಹೆಸರನ್ನು ಏಕೆ ನೀಡಿದನೆಂದು ಪ್ರಶ್ನಿಸಿದರೆ ಅದಕ್ಕೆ "ಯಾಕೆಂದರೆ ವದಂತಿಗಳು ವೇಗವಾಗಿ ಚಲಿಸುತ್ತವೆ" ಎಂದು ಮುಗುಳ್ನಕ್ಕನು. ಪೌಲನ ಕುರಿತು ವೇಗವಾಗಿ ಚಲಿಸಿದ ವದಂತಿ ಏನೆಂದರೆ: "ನೀನು ಅನ್ಯಜನರಲ್ಲಿ ವಾಸವಾಗಿರುವ ಯೆಹೂದ್ಯರೆಲ್ಲರಿಗೆ - (ನಂಬಿದ ಯೆಹೂದ್ಯರಿಗೆ) ನಿಮ್ಮ ಮಕ್ಕಳಿಗೆ ಸುನ್ನತಿ ಮಾಡಿಸಬೇಡಿರಿ,[26] ನಿಮ್ಮ ಆಚಾರಗಳನ್ನು ಅನುಸರಿಸಿ ನಡೆಯ ಬೇಡಿರಿ ಎಂದು ಹೇಳಿ ಮೋಶೆಯ ಧರ್ಮವನ್ನು ತ್ಯಾಗಮಾಡಬೇಕೆಂಬುದಾಗಿ ಬೋಧಿಸುತ್ತಿದ್ದೀ ಎಂದು ನಿನ್ನ ವಿಷಯದಲ್ಲಿ ಬಹಳವಾಗಿ ಕೇಳಿದ್ದಾರೆ" (ವಚನ 21).

ಅನೇಕ ವದಂತಿಗಳಂತೆ, ಇದರಲ್ಲಿ ಪ್ರಾಥಮಿಕ ಸಂತ್ಯಾಂಶವಿದ್ದರೂ, ಅದರೆ ಅದರ ಹಿನ್ನೆಲೆಯ ತತ್ವ ತಪ್ಪಾಗಿತ್ತು. ಯಾರಾದರೂ ಆಗಿರಲಿ, ಯೆಹೂದ್ಯನಾಗಲೀ ಅಥವಾ ಅನ್ಯನಾಗಲೀ ಮೋಶೆಯ ಧರ್ಮಶಾಸ್ತ್ರದಿಂದ ನೀತಿವಂತನಾಗುವನು ಎಂದು ಪೌಲನು ತಿಳಿಸಿರಲಿಲ್ಲ (ರೋಮಾಪುರ 3:20; ಗಲಾತ್ಯ 2:16; 3:11; 5:4). ಸುನ್ನತಿಗೂ ರಕ್ಷಣೆಗೂ ಸಂಬಂಧವಿಲ್ಲವೆಂದು ತಿಳಿಸಿದ್ದನು (ರೋಮಾಪುರ 2:25-29; ಗಲಾತ್ಯ 5:6); ಆದರೆ ಅವನು ಯೆಹೂದ್ಯರಿಗೆ ಯೆಹೂದ್ಯತ್ವವನ್ನು ತೊರೆಯಬೇಕು ಎಂಬ ಸಭೆಗಳನ್ನು ನಡೆಸಿರಲಿಲ್ಲ.[27]

"ವಾಡಿಕೆ" ಬಗ್ಗೆ, ಯೆಹೂದ್ಯರು ಆಚರಿಸುತ್ತಿದ್ದ ಪದ್ಧತಿಗಳ ಕುರಿತು, ಆ ಪದ್ಧತಿಗಳು ಎಲ್ಲಿಯವರೆಗೆ ಅವರಿಗೆ ರಾಷ್ಟ್ರೀಯತೆಗೆ ಸಹಾಯಕವಾಗಿತ್ತೊ, ಅದರಲ್ಲಿ ಯಾವ ತಪ್ಪಾಭಿಪ್ರಾಯವೂ ಇರುವದಿಲ್ಲವೆಂದು ಪೌಲನು ತಿಳಿಸಿದ್ದನು (ಮತ್ತಾಯ 15:3) ಮತ್ತು ಅವುಗಳು, ಅನ್ಯರಿಗೆ ಕಟ್ಟುಪಾಡುಗಳಾಗಬಾರದಿತ್ತು.[28] ಯೆಹೂದ್ಯರನ್ನು ಸುವಾರ್ತೆಯ ಮೂಲಕ ಸಂದರ್ಶಿಸುವ ಉದ್ದೇಶದಿಂದ, ಪೌಲನು ತಿಮೊಥಿಗೆ ಸುನ್ನತಿ ಮಾಡಿಸಿದನು (ಅಪೊಸ್ತಲರ ಕೃತ್ಯಗಳು 16:3).[29] ನಂಬದೆ ಇರುವ ಯೆಹೂದ್ಯರಿಗಾಗಿ, ಪೌಲನು, "ಯೆಹೂದ್ಯರನ್ನು ಸಂಪಾದಿಸಿಕೊಳ್ಳುವದಕ್ಕೆ ಯೆಹೂದ್ಯರಿಗೆ ಯೆಹೂದ್ಯನಂತಾದೆನು. ನಾನು ನಿಯಮಗಳಿಗೆ ಅಧೀನನಲ್ಲದವನಾದರೂ ನಿಯಮಗಳಿಗೆ ಅಧೀನರಾದವನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಅವರಿಗೆ ನಿಯಮಗಳಿಗೆ ಅಧೀನನಂತಾದೆನು" (1 ಕೊರಿಂಥ 9:20).

ಆ ವದಂತಿಗಳು ಸುಳ್ಳಾಗಿದ್ದವು - ಅದು ಸುಳ್ಳೆಂದು ಹಿರಿಯರು ಸಹ ಅರಿತ್ತಿದ್ದರು.[30] ಆದಾಗ್ಯೂ, ಆ ಹಿರಿಯರುಗಳು ಅದನ್ನು ಬಿಕ್ಕಟ್ಟನ್ನಾಗಿ ಮಾಡಿದ್ದರು: "ಹೀಗಿರುವಲ್ಲಿ ಏನು ಮಾಡಬೇಕು? ನೀನು ಬಂದಿರುವದನ್ನು ಹೇಗೂ ಕೇಳುವರು" (ವಚನ 22).[31] "ಅವರು" ಎಂಬುದು ಯೆರೂಸಲೇಮಿನಲ್ಲಿ ಜೀವಿಸುತ್ತಿದ್ದ ಯೆಹೂದ್ಯರಿಗೆ ಸೂಚನೆಯಾಗಿದೆ (ವಚನ 20). ಪಂಚಾಶತ್ತಮ ದಿನವು, ವಾರದ ಮೊದಲ ದಿನವೇ ಬಂದಿದ್ದರಿಂದ, ಆ ಪ್ರದೇಶದ ಸಕಲ ಕ್ರೈಸ್ತರು ರೊಟ್ಟಿ ಮುರಿಯುವದಕ್ಕಾಗಿ ಸೇರಿ ಬರುವವರಿದ್ದರು (20:7[32]). ಆಗ ಹಿರಿಯರ ಪ್ರಶ್ನೆ ಏನೆಂದರೆ, "ಈ ಸಾವಿರಾರು ಜನರು ಸೇರಿ ಬರುವವರಿದ್ದರಿಂದ, ಮತ್ತು ಅವರೆಲ್ಲರೂ ಕೇಳಲ್ಪಟ್ಟ ವದಂತಿಯಿಂದ ಈಗಾಗಲೇ ಗೊಂದಲಕ್ಕೊಳಗಾಗಿದ್ದರು, ಮತ್ತು ಈಗ ಪೌಲನನ್ನು

ಅವನ ಸಂಗಡವಿದ್ದ ಅನ್ಯ ಸ್ನೇಹಿತರನ್ನು ನೋಡುವುದಾದರೆ, ಅಲ್ಲಿ ಉದ್ಭವಿಸಬಹುದಾದ ಕ್ರೋಧ ಮತ್ತು ದೊಂಬಿಯನ್ನು ನಾವುಗಳು ಹೇಗೆ ತಡೆಗಟ್ಟಬಹುದು?"

ಹಿರಿಯರೆಲ್ಲರೂ, ದೇವರಿಗೆ ಒಂದು ಪ್ರಶ್ನೆಯನ್ನು ಕೇಳುವ ಒಂದು ಸಂದರ್ಭವಾಯಿತು. "ಈಗ ನಾವೇನು, ಮಾಡಬೇಕು?" ಅವರು ಈ ರೀತಿ ಮಾಡಿರುವ ಸೂಚನೆಯೂ ಇರಲಿಲ್ಲ. ಅವರು ಪೌಲನ ಬೋಧನೆಯಂತೆ ಮಾಡಲು ಅಪೇಕ್ಷೆ ಯಿದ್ದರೂ, ಅದರಂತೆ ಮಾಡಿರಲಿಲ್ಲ.[33]

ಅವರು ಒಂದು ವೇಳೆ ನನಗೆ "ನಾವೇನು ಮಾಡಬೇಕು?" ಎಂಬ ಪ್ರಶ್ನೆಯನ್ನು ಕೇಳಿದ್ದರೆ ದೇವರಿಂದ ನೇಮಿತಗೊಂಡ ನಾಯಕನಂತೆ ಉತ್ತರವನ್ನು ನೀಡುತ್ತಿದ್ದೆ! ಈ ವಿಷಯದ ಕುರಿತು ಜಾನ್‌ವೆಸ್ಲಿಯವರ ಅಭಿಪ್ರಾಯದಂತೆ, ಯಾಕೋಬನು ಆ ಕ್ರೈಸ್ತರಾದ ಯೆಹೂದ್ಯರಿಗೆ: ನಾನು ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸುವದಿಲ್ಲ; ಪೇತ್ರನಾಗಲೀ ಪಾಲಿಸಲಿಲ್ಲ, ನೀವು ಪಾಲಿಸುವ ಅಗತ್ಯವಿಲ್ಲ![34] ಆ ಹಿರಿಯರ ಹೊಣೆಯ ನಿರ್ಲಕ್ಷ್ಯದ ಕುರಿತು, ಲಾಯಿನ್ ಒಗಿಲಿವಿಯವರು ಬರೆದು, "ಇಷ್ಟೇ ಸಾಕು ಎಂದು ಯಾರೊಬ್ಬರೂ ಹೇಳಲಿಲ್ಲ! ನಾವು ನಮ್ಮ ಸಹೋದರನಾದ ಪೌಲನನ್ನು ನಂಬುತ್ತೇವೆ ಮತ್ತು ಅವನ ಕುರಿತ ವದಂತಿಗಳು ತಪ್ಪು ಎಂದು ಹೇಳಲಿಲ್ಲ. ಈ ಮುಂದೆ ಅವನ ಸೇವೆಯ ಕುರಿತು ಟೀಕೆ ಮಾಡಬಾರದು. ನಮ್ಮ ಒಪ್ಪಂದವನ್ನು ಅಪೊಸ್ತಲನು ನಂಬಿಗಸ್ತನಾಗಿ ಕಾಪಾಡಿದನು ಎಂದು ಹೇಳಬಹುದಿತ್ತಲ್ಲವೇ?"[35]

## ತಬ್ಬಿಬ್ಬು ಮಾಡುವ ಶಿಫಾರಸ್ಸು (21:23-25)

ಪ್ರತ್ಯುತ್ತರ ಪಡೆಯಲು ಹಿರಿಯರಾದವರು ಪ್ರಶ್ನೆಗಳನ್ನು ಕೇಳದೆ, ಅದು ಪೂರ್ವ ಕಾರ್ಯ ಸೂಚಿಯಾಗಿತ್ತು. ಅವರು ಈ ಮೊದಲೇ ಈ ವಿಚಾರದ ಕುರಿತು ಚರ್ಚೆ ಮಾಡಿದವರಾಗಿ, ಒಂದು ಯೋಜನೆಯ ನಿಮಿತ್ತ ಯಾಕೋಬನ ಮನೆಗೆ ಬಂದಿದ್ದರು. ಅವರೇ "ಪರಿಹಾರವನ್ನು ಸೂಚಿಸದೆ," ಪೌಲನೇ ತನ್ನ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳಲಿ ಎಂದು ಬಂದಿದ್ದರು ಆದ್ದರಿಂದ ಅವರು, ಪೌಲನಿಗೆ, "ಆದಕಾರಣ ನಾವು ನಿನಗೆ ಹೇಳುವ ಕೆಲಸವನ್ನು ಮಾಡು" ಎಂದರು (ವಚನ 23ಎ). ಅವರು ಸಲಹೆ ನೀಡದೆ, ಆಜ್ಞೆಮಾಡಿದರು.[36]

ಆದರೆ, "ಆಜ್ಞಾರ್ಥಕ ಶಿಫಾರಸ್ಸು" ಏನೆಂದರೆ: "ನಮ್ಮಲ್ಲಿ ವ್ರತ ಹಿಡಿದವರು ನಾಲ್ಕು ಮಂದಿ ಇದ್ದಾರೆ ನೀನು ಅವರನ್ನು ಕರೆದುಕೊಂಡು ಅವರೊಡನೆ ನಿನ್ನನ್ನು ಶುದ್ಧಿ ಮಾಡಿಕೊಂಡು ಅವರು ತಮ್ಮ ವ್ರತ್ತವನ್ನು ತೀರಿಸಿಕೊಳ್ಳುವದಕ್ಕಾಗಿ ಅವರಿ ಗೋಸ್ಕರ ಹಣವೆಚ್ಚಮಾಡು" (ವಚನಗಳು 23ಬಿ, 24ಎ). ಉಲ್ಲೇಖಿಸಿರುವ ಆ ನಾಲ್ಕು ಜನರು ಯೆರೂಸಲೇಮಿನ ಸಭೆಯ ಸದಸ್ಯರಾಗಿರ ಬಹುದು.[37] ಆ ಮನುಷ್ಯರು ತಲೆಯನ್ನು ಬೋಳಿಸಿ ಕೊಳ್ಳುವ ವ್ರತವನ್ನು ಮಾಡಿದ್ದರಿಂದ, ಬಹುಶಃ ಅವರು ನಾಜೀರರಿರ ಬಹುದು.[38]

ನಾಜೀರರು ಪ್ರತ್ಯೇಕವಾಗಿರುವ ಹಾಗೂ ಮೀಸಲಾಗಿರುವ ವ್ರತವನ್ನು ಕೈಗೊಳ್ಳು ತ್ತಿದ್ದರು ಅದು ಮೂವತ್ತು ದಿವಸಗಳಿಂದ, ಜೀವನ ಪರ್ಯಾಂತರವಿರಬಹುದು.[39] ನಾಜೀರ ವ್ರತವನ್ನು ಮಾಡುವವರು ತಲೆಯ ಕೂದಲನ್ನು ಕತ್ತರಿಸಬಾರದು, ದ್ರಾಕ್ಷಾರಸವನ್ನು ಕುಡಿಯಬಾರದು, ಯಾವ ಶವವನ್ನು ಮುಟ್ಟಬಾರದು (ಅರಣ್ಯಕಾಂಡ 6:2-8). ವಚನ 26ರಲ್ಲಿ "ಶುದ್ದೀಕರಣದ ದಿವಸದ ಕುರಿತು ತಿಳಿಸುವದರಿಂದ" ಮತ್ತು ವಚನ 27ರಲ್ಲಿ "ಏಳು ದಿವಸಗಳನ್ನು" ಉಲ್ಲೇಖಿಸಿರುವದರಿಂದ, ಆ ನಾಲ್ವರು ಶವವನ್ನು ಮುಟ್ಟಿರಬಹುದು ಎಂಬುದು ಅನೇಕರ ಅಭಿಪ್ರಾಯವಾಗಿದೆ, ಆದ್ದರಿಂದ ಅವರು ಕ್ಷೌರಮಾಡಿಸಿಕೊಂಡು, ವ್ರತವನ್ನು ಮುಂದುವರಿಸಬೇಕಿತ್ತು (ಅರಣ್ಯಕಾಂಡ 6:9-12). ಆ ಶುದ್ಧೀಕರಣಕ್ಕೆ ಸಮಯದ ಹಾಗೂ ಹಣದ ಅಗತ್ಯತೆಯಿತ್ತು. ಪೌಲನು ಆ ವೆಚ್ಚದ ಹೊಣೆಯನ್ನು ತೆಗೆದುಕೊಳ್ಳಬೇಕೆಂಬ ಸಲಹೆಯನ್ನು ಆ ಹಿರಿಯರು ನೀಡಿದರು.[40]

ಪೌಲನು ದೇವಾಲಯಕ್ಕೆ ಹೋಗುವ ಅನುಕೂಲದ ಶುದ್ಧೀಕರಣದ ಬಹು ಸರಳವಾಗಿತ್ತು.[41]

ಆ ನಾಲ್ವರೊಂದಿಗೆ ಪೌಲನೂ ಸಹ ಶುದ್ಧಿಯಾಗಬೇಕೆಂಬುದು (ಹಿರಿಯರ ಮನಸ್ಸಿನಲ್ಲಿ) ಪೌಲನು ಇನ್ನು ಮುಂದೆ ಧರ್ಮಶಾಸ್ತ್ರಕ್ಕೆ ಅಧೀನನು ಎಂಬ ಸಂಕೇತವಾಗಿತ್ತು.

ಅಪೊಸ್ತಲರ ಕೃತ್ಯಗಳು 21:23-27[42] ರಲ್ಲಿ ಇರುವ ವ್ರತ ಹಾಗೂ ಅಲ್ಲಿ ನಡೆದ ಘಟನೆಯ ಕುರಿತು ಹೆಚ್ಚು ಗೊಂದಲಗೊಳ್ಳುವ ಅಗತ್ಯವಿಲ್ಲ. ನಮ್ಮ ಪಾಠಕ್ಕನುಗುಣವಾಗಿ, ನಾಜೀರ ವೃತದ ಗುರುತರವಾದ ಉದ್ದೇಶವೇನೆಂದರೆ, ಆ ವ್ರತದಲ್ಲಿ ಯಜ್ಞವು ಅಡಕವಾಗಿತ್ತು, ಅದರಲ್ಲಿ ಪಾಪದ ಪ್ರಾಯಶ್ಚಿತ್ತವೂ ಒಳಗೊಂಡಿತ್ತು: ಒಬ್ಬನು ಶುದ್ಧಿಪಡಿಸಿಕೊಂಡ ನಂತರ, "ಯಾಜಕನು ದೋಷಪರಿಹಾರಕ ಯಜ್ಞವಾಗಿ ಒಂದು ಪಾರಿವಾಳವನ್ನು *ಸರ್ವಾಂಗ ಹೋಮವಾಗಿ* ಇನ್ನೊಂದು ಪರಿವಾಳವನ್ನು ಸಮರ್ಪಿಸಿದನು" (ಅರಣ್ಯಕಾಂಡ 6:11; ಒತ್ತಿ ಹೇಳಿದ್ದು ನನ್ನದು). ಒಬ್ಬನು ತನ್ನ ಶುದ್ಧೀಕರಣವನ್ನು ಮುಗಿಸಿದ ನಂತರ ಇತರೆ ಯಜ್ಞಗಳೊಂದಿಗೆ *ಪೂರ್ಣಾಂಗವಾದ ಒಂದು* ವರುಷದ ಟಗರನ್ನು ತರಬೇಕಿತ್ತು (ಅರಣ್ಯಕಾಂಡ 6:14; ಒತ್ತಿ ಹೇಳಿದ್ದು ನನ್ನದು).

ನಂತರ ಆ ನಾಲ್ವರ ಖರ್ಚನ್ನು ಪೌಲನೇ ಬರಿಸಬೇಕೆಂದು ಅವನಿಗೆ "ಸೂಚನೆ" ನೀಡಿದ ನಂತರ, ಹಿರಿಯರು ಪೌಲನಿಗೆ, "ಹೀಗೆ ಮಾಡಿದರೆ ಎಲ್ಲರೂ ನಿನ್ನ ವಿಷಯವಾಗಿ ತಾವು ಕೇಳಿದ ಸುದ್ದಿ ನಿಜವಲ್ಲವೆಂತಲೂ ನೀನಾದರೋ ಧರ್ಮಶಾಸ್ತ್ರವನ್ನು ಕೈಗೊಂಡು ನಡೆಯುತ್ತಿ ಎಂತಲೂ ತಿಳುಕೊಳ್ಳುವರು" (ವಚನ 24ಬಿ). ಧರ್ಮಶಾಸ್ತ್ರವನ್ನು ಪಾಲಿಸುವ ವಿಷಯದಲ್ಲಿ ಹಿರಿಯರು ಮಾತನಾಡುವಾಗ ಯಾಕೋಬನು ನಾಚಿಕೆಗೊಂಡನೇ? ಎಂಟು ಅಥವಾ ಅಧಿಕ ವರ್ಷಗಳ ಹಿಂದೆ, ಯಾಕೋಬ ಮತ್ತು ಹಿರಿಯರು ಪೇತ್ರನ "ಹೀಗಿರುವದರಿಂದ ನಮ್ಮ ಪಿತೃಗಳಾಗಲಿ ನಾವಾಗಲಿ ಹೊರಲಾರದ ನೊಗವನ್ನು ನೀವು ಶಿಷ್ಯರ ಮೇಲೆ ಹಾಕಬಾರದೆಂಬ" ಮಾತಿಗೆ ಸಮ್ಮತಿಸಿದ್ದರು (15:10ಬಿ).[43] ಆಗ, ಅದೇ ಹಿರಿಯರು ಪೌಲನಿಗೆ, ಬಾರವಾದ ನೊಗವನ್ನು ಕ್ರೈಸ್ತರು ಹೊರಬೇಕೆಂಬ ವಿಷಯವನ್ನು ತಿಳಿಸಬೇಕೆಂದು "ಮನವಿ" ಮಾಡಿದರು!

ಆ ಹಿರಿಯರುಗಳು ಈ ಹಿಂದೆ ಅವರು ಮಾಡಿದ್ದ ಸಹಜವಾದ ನಿರ್ಣಯವನ್ನು ಹಿಂತೆಗೆಯಲು ಪ್ರಯತ್ನಿಸಿದರು, ಅವರ ನಿರ್ಣಯವು ನೀತಿವುಳ್ಳದ್ದಾಗಿರಲಿಲ್ಲ ಎಂದರೆ ಅವರು ಹಿಂಜರಿದರು: "*ಅನ್ಯಜನರಲ್ಲಿ ಯೇಸುವನ್ನು ನಂಬಿರುವವರ ವಿಷಯ ವಾದರೋ* ವಿಗ್ರಹಕ್ಕ ನೈವೇದ್ಯ ಮಾಡಿದ್ದನ್ನೂ ರಕ್ತವನ್ನೂ ಕುತ್ತಿಗೆ ಹಿಸುಕಿ ಕೊಂದದ್ದನ್ನೂ ಹಾದರವನ್ನೂ ಬಿಟ್ಟು ದೂರವಾಗಿರಬೇಕೆಂಬುದಾಗಿ ನಾವು ತೀರ್ಮಾನಿಸಿ ಬರೆದೆವು ಅಂದವು" (21:25; ಒತ್ತಿ ಹೇಳಿದ್ದು ನನ್ನದು) (15:20, 29 ನೋಡಿರಿ).[44] ಇನ್ನೊಂದು ಪದದಲ್ಲಿ: "ನಮ್ಮ ಮನವಿಯಲ್ಲಿ ಕ್ರೈಸ್ತರಾದ ಅನ್ಯರು ಒಳಗೊಂಡಿರುವದಿಲ್ಲ. ಕ್ರೈಸ್ತರಾದ ಯೆಹೂದ್ಯರ ಲಾಭಕ್ಕಾಗಿ ಮಾಡಿರಿ ಎಂಬ ಅರ್ಥವನ್ನು ನೀಡಿದರು."

ಯೆರೂಸಲೇಮಿನ ಹಿರಿಯರಿಗಾಗಿ ನಾನು ಪರಿತಾಪ ಪಡುತ್ತೇನೆ ಅವರು ಯೆಹೂದ್ಯ ಮತಾವಲಂಭಿಗಳ ನಡುವೆ ಜೀವಿಸುವಾಗ, ಅಸಾಧ್ಯವಾದ ಕೆಲಸವನ್ನು ಮಾಡಬೇಕಾಯಿತು. ಯಾಕಂದರೆ ಸಾಮಾನ್ಯವಾಗಿ ಯೆಹೂದ್ಯರು ತಮ್ಮವರ ಹಾಗೂ ತಮ್ಮ ಜನಾಂಗದ ನಡುವೆ ಯಾವುದೇ ವಿಧವಾದ ವ್ಯತ್ಯಾಸಗಳನ್ನು ಮಾಡಿರಲಿಲ್ಲ.[45] ಸತ್ಯವೇದದ ಸಮಯದಲ್ಲಿ ಇದು ಸತ್ಯಸಂಗತಿಯಾಗಿತ್ತು; ಈ ದಿನಗಳಲ್ಲೂ ಇದು ಸತ್ಯವೇ ಆಗಿದೆ. ಸಾಮಾನ್ಯವಾದ ಯೆಹೂದ್ಯನಿಗೆ ಧರ್ಮಶಾಸ್ತ್ರವನ್ನು ಬಿಡಬೇಕು ಅಂದರೆ, ಅವನ ಯೆಹೂದತ್ವವನ್ನೇ ಬಿಡು ಎಂಬ ಅರ್ಥವಾಗಿದೆ. "ನಾವು ಧರ್ಮಶಾಸ್ತ್ರಕ್ಕೆ ವಿರೋಧವಾಗಿ ಮಾತನಾಡಿದರೆ, ಸಭೆಯಲ್ಲಿ ಗೊಂದಲವಾಗಬಹುದೆಂದು ಹಿರಿಯರು ತಿಳಿದರು, ಮತ್ತು ಅವರ ನೆರೆಹೊರೆಯವರಲ್ಲಿ ಹಾಗೂ ತಮ್ಮ ಸ್ನೇಹಿತರಲ್ಲಿ ತಮ್ಮ ವರ್ಚಸ್ಸನು ಕಳಕೊಳ್ಳುವರೆಂದು" ಅವರು ತಿಳಿದಿದ್ದರು.

ಇನ್ನೊಂದು ವಿಧದಲ್ಲಿ, ಯೆರೂಸಲೇಮಿನ ಹಿರಿಯರು, ಅವರ ಸಮಾಜಕ್ಕೂ ಹಾಗೂ ಅವರ ಸಭೆಗೂ, ಧರ್ಮಶಾಸ್ತ್ರದ ಅತಿಯಾದ ಭಾರವನ್ನು ಹಾಕಿದ್ದರು ಎಂದು ನಾನು ಯೋಚಿಸಲೇ ಬೇಕು (15:5; ಗಲಾತ್ಯ 2:11, 12). ಯೆಹೂದ್ಯರ ಸಭಾ ಮಂದಿರಗಳಲ್ಲಿ ಪೌಲನು ಮಾಡಿದ

ಬಲವಾದ ಪ್ರಸಂಗಗಳನ್ನು, ಹಿರಿಯರುಗಳು ಪ್ರೋತ್ಸಾಹಿಸಲಿಲ್ಲ ಎಂಬ ಸಂಶಯವು ನನಗಿದೆ ಆ ಪ್ರಸಂಗದ ನಿಮಿತ್ತ ಜನರು ಅವನನ್ನು ಹೊಡೆದಿದ್ದರು (ಅವನನ್ನು ಹೊರ ಹಾಕಿದ್ದರು) (ಗಮನಿಸಿ 2 ಕೊರಿಂಥ 11:24).[46] ಆದಾಗ್ಯೂ ಅವನು ಸಾಧ್ಯವಾದಷ್ಟು ಎಲ್ಲರೊಂದಿಗೆ ಸಮಧಾನದಿಂದ ಇರುವ (ರೋಮಾಪುರ 12:18ಬಿ) ಸವಾಲನ್ನು ಹೊಂದಿದ್ದರೂ, ಸತ್ಯವನ್ನು ರಾಜೀ ಮಾಡಲಿಲ್ಲ, ಇದು ಕಷ್ಟಕರವಾದದ್ದೇ (ಜ್ಞಾನೋಕ್ತಿ 23:23) ಅದು ಯೆರೂಸಲೇ ಮಿನಲ್ಲಿಯಾಗಲಿ ಅಥವಾ ನೀವುಗಳು ಇರುವಲ್ಲಿ ಸುಲಭವಾದದ್ದಲ್ಲ.

## ಒಂದು ಆಶ್ಚರ್ಯವಾದ ಫಲಿತಾಂಶ (21:26, 27)

ಹಿರಿಯರಿಂದ, ಅವನು ಏನು ಮಾಡಬೇಕೆಂಬ ಸಲಹೆಯನ್ನು ಪಡೆದಾಗ, ಪೌಲನು ಏನು ಮಾಡಿದನು? ಅದನ್ನು ಪೌಲನು ವಿರೋಧಿಸಿ ನನಗೆ ಆಜ್ಞೆ ನೀಡಲು ನೀವ್ಯಾರು? ನೀವು ಈ ಸ್ಥಳೀಯ ಹಿರಿಯರಾಗಿರುವದರಿಂದ ನನಗೆ ಸಲಹೆ ನೀಡಲು ಹೇಗೆ ಸಾಧ್ಯ. ಈ ವಿಚಾರದ ತಕರಾರನ್ನು ನೀವುಗಳೇ ಪರಿಹಾರ ಮಾಡಿಕೊಳ್ಳಬೇಕಲ್ಲವೇ, ಅದು ನನ್ನ ಹೊಣೆಯಲ್ಲ ಅಂದಿರುವನೇ? ಹೌದು, ಕೆಲವು ಸನ್ನಿವೇಶಗಳಲ್ಲಿ, ನಾನು ಧರ್ಮಶಾಸ್ತ್ರಕ್ಕೆ ಒಳಪಡಬೇ ಕಿರುವದನ್ನು ಅರಿತಿರುವೆನು, ಯೆಹೂದ್ಯರನ್ನು[47] ರಕ್ಷಿಸಬೇಕೆಂಬ ಒಂದೇ ಉದ್ದೇಶದಿಂದ ಅದನ್ನು ನಾನು ಮಾಡಬೇಕು, ಎಂಬ ಅಹವಾಲನ್ನು ಮುಂದಿಟ್ಟೊಡನೆಯೇ ಪೌಲನು ಈ ಧರ್ಮಶಾಸ್ತ್ರವನ್ನು ಅವನೇ ಪಾಲಿಸಿದನು ಎಂಬ ಸಿದ್ಧಾಂಥವನ್ನು ಅವರು ಪ್ರತಿಪಾದಿಸಿದರೆ (ಅಪೊಸ್ತಲರ ಕೃತ್ಯಗಳು 15:5)?

ಹಿರಿಯರೆಲ್ಲರೂ ಸೇರಿ ಪೌಲನನ್ನು ಒಂದು ಸಂದಿಗ್ಧ ಪರಿಸ್ಥಿತಿಗೆ ಸಿಲುಕಿಸಿದ್ದರು. ಸಮಧಾನ ಹಾಗೂ ಸಹೋದರತ್ವವನ್ನು ನಿರ್ಮಾಣ ಮಾಡುವ ಉದ್ದೇಶದಿಂದ ಪೌಲನು ಯೆರೂಸಲೇಮಿಗೆ ಬಂದಿದ್ದನು, ಆದರೆ ಅವನು ಬಂದಿರುವ ಉದ್ದೇಶದಿಂದ ಜನರಲ್ಲಿ ಸಮಂಜಸ ಉಂಟಾಗುವದು ಎಂದರು. ಅವನು ಅಲ್ಲಿ ಗೆಲ್ಲುವ ಪ್ರಮಯವೇ ಉಂಟಾಗಲಿಲ್ಲ. ಅವನು ಹಿರಿಯರ ಯೋಜನೆಯನ್ನು ನಿರಾಕರಿಸಿದರೆ, ಅವನನ್ನು ಸಭೆಯಿಂದ ಹೊರಹಾಕುವ ಸಾಧ್ಯತೆಯಿತ್ತು; ಮತ್ತು ಮಾನ್ಯತೆ ಮಾಡದಿದ್ದರೆ, ಅವನು ಅಸಮಂಜಸ ಕಾರ್ಯಮಾಡುವವನು ಎಂಬ ಅಪವಾದವನ್ನು ಹೊಂದುತ್ತಿದ್ದನು.

ಹಿರಿಯರ ಯೋಜನೆಗೆ ಪೌಲನು ಮಾನಸಿಕ ಅಥವಾ ಮೌಖಿಕ ಪ್ರತಿಕ್ರಿಯೆಯನ್ನು ನೀಡಿ ದನು ಎಂದು ಲೂಕನು ತಿಳಿಸಿರುವದಿಲ್ಲ. ಪೌಲನು ಈ ವಿಚಾರವನ್ನು ಸಂಕ್ಷಿಪ್ತಮಾಡಿ, ಮುಂದೆ ಜರುಗುವ ಘಟನೆಯಿಂದ ಉಂಟಾಗುವ ಅವನ ಬೇಡಿಗಳಿಗೆ ಸಿದ್ಧನಾಗುತ್ತಿದ್ದನು. ಆದರೆ ಅವನು ಅವುಗಳನ್ನು ಸರಳವಾಗಿ ಮಾಡಿ ಮುಗಿಸಲು ಮುಂದಾದನು, ಅದರ ಪರಿಣಾಮವಾಗಿ: "ಆಗ ಪೌಲನು ಆ ಮನುಷ್ಯರನ್ನು[48] ಕರೆದುಕೊಂಡು ಮರುದಿನ ಅವರೊಡನೆ ತನ್ನನ್ನು ಶುದ್ಧಿ ಮಾಡಿಕೊಂಡು ವ್ರತದ ದಿವಸಗಳು ಮುಗಿದವೆಂದು ತಿಳಿಸುವವನಾಗಿ ದೇವಾಲಯದೊಳಗೆ ಹೋದನು,[49] ಪ್ರತಿಯೊಬ್ಬನಿಗೋಸ್ಕರ ಮಾಡಬೇಕಾದ ಅರ್ಪಣೆಯನ್ನು ಮುಂದೆ ಅರ್ಪಿಸ ಬೇಕಾಗಿತ್ತು" (21:26).

ಆ ನಾಲ್ವರು ಏಳು ದಿನಗಳ ಶುದ್ಧಿ ಹೊಂದದ ಹೊರತು, ದೇವಾಲಯದೊಳಗೆ ಹೋಗುವ ಸಾಧ್ಯತೆಯಿರಲಿಲ್ಲ, ಆದರೆ ಪೌಲನ ಶುದ್ಧೀಕರಣವು ಒಂದೇ ದಿನದಲ್ಲಿ ಅಂತ್ಯಗೊಳ್ಳುವದಿತ್ತು.[50] ಆಗ ಅವನು ಅವರ ಪರವಾಗಿ ದೇವಾಲಯ ಪ್ರವೇಶ ಮಾಡುವದಕ್ಕೆ ಸಾಧ್ಯತೆಯಿತ್ತು, ಮತ್ತು ಶುದ್ಧೀಕರಣದ ಅಂತ್ಯದಲ್ಲಿ ಯಜ್ಞವನ್ನು ಅರ್ಪಿಸುವ ಮಾರ್ಪಾಟು ಮಾಡಲು ಸಹ ಸಾಧ್ಯವಿತ್ತು.

ಇನ್ನೂ ಎರಡು ಸಂಗತಿಗಳನ್ನು ಗಮನಿಸಬೇಕು: (1) ಪೌಲನು ಆರಂಭ ಮಾಡಿದ್ದನ್ನು ಪೂರ್ಣಗೊಳಿಸಲಿಲ್ಲ. ಮುಂದಿನ ವಚನದಲ್ಲಿ, "*ಆ ಏಳು ದಿವಸಗಳು ತುಂಬುತ್ತಿರುವಾಗ* ಆಸ್ಯ ಸೀಮೆಯಿಂದ ಬಂದಿದ್ದ ಯೆಹೂದ್ಯರು ಅವನನ್ನು ದೇವಾಲಯದಲ್ಲಿ ಕಂಡು ಗುಂಪುಕೂಡಿದ್ದ ಜನರೆಲ್ಲರನ್ನು ಕಲಕಿ ಅವನನ್ನು ಹಿಡಿಯಲು ಯತ್ನಿಸಿದರು" (ವಚನ 27; ಒತ್ತಿ ಹೇಳಿದ್ದು

ನನ್ನದು). ಯಜ್ಞವರ್ಪಿಸುವ ಮೊದಲು, ಅನ್ಯರಾದ ಜನರು ಅವನನ್ನು ಹಿಡಿದರು (ಏಳನೇ ದಿವಸದ ಅಂತ್ಯದಲ್ಲಿ ಯಜ್ಞವರ್ಪಿಸುತ್ತಿದ್ದರು). ಆ ರಕ್ತವನ್ನು ಸುರಿಸುವ ಯಜ್ಞದಿಂದ ಪೌಲನನ್ನು ದೇವರು ತಪ್ಪಿಸಿದನೇ? ಇದು ಆಸಕ್ತಿಯ ವಿಷಯವೇ. (2) ಹಿರಿಯರ ಯೋಜನೆಗನುಗುಣವಾಗಿ ಸಮಸ್ಯೆಯು ಪರಿಹಾರವಾಗದೆ, ಪೌಲನ ಕ್ರಿಯೆಗಳಿಂದಲೇ ಸಮಸ್ಯೆಯು ಉದ್ಭವಿಸಿತು. ಅವನು ದೇವಾಲಯಕ್ಕೆ ಹೋದ ವಿಚಾರದಲ್ಲಿ ಯೆಹೂದ್ಯ ವಿಶ್ವಾಸಿಗಳಲ್ಲಿ ಉಂಟಾಗಿರಬಹುದಾದ ಸತ್ಯಾಸತ್ಯತೆಗಳನ್ನು ನಾವು ಅರಿತಿರುವದಿಲ್ಲ.[51] ಆದರೆ ಅನ್ಯರು ಕಲಹಮಾಡಿ ಅವನನ್ನು ಹಿಡಿದರು ಎಂದು ನೋಡುತ್ತೇವೆ.

## ಮುಕ್ತಾಯ

ಹಿರಿಯರ ಮಾತಿಗೆ ಪೌಲನು ಏಕೆ ಒಪ್ಪಿಕೊಂಡನು ಎಂಬುದನ್ನು ಮುಂದಿನ ಪಾಠದಲ್ಲಿ ಗಮನಿಸೋಣ. ಅವನ ಕ್ರಿಯೆ ಸರಿಯೇ ಅಥವಾ ತಪ್ಪೇ ಎಂಬುದಾಗಿಯೂ ನೋಡೋಣ. ಹೇಗೂ ಇದರಿಂದ ನಾವುಗಳು ಅನೇಕ ಪಾಠಗಳನ್ನು ಕಲಿಯಬಹುದು:

ಸಭೆಯಲ್ಲಿ ಉಂಟಾದ ಸಂಬಂಧಗಳ ಕುರಿತು ಕಲಿಯಬಹುದು: ಒಬ್ಬನಿಂದ ಇತರ ಸದಸ್ಯರಿಗೆ ಬರಹುದಾದ ಪರಿಣಾಮವನ್ನು ಗಮನಿಸಬಹುದು. ನೀವು ಏನೇ ಮಾಡಿದರೂ, ಎಲ್ಲರನ್ನೂ ಮೆಚ್ಚಿಸುವದು ಅಸಾಧ್ಯ ಎಂಬ ಇನ್ನೊಂದು ಪಾಠವನ್ನು ಕಲಿಯುತ್ತೇವೆ. ಕೆಲವರು ನಿಮಗಾದ ಬೇಡವಾದ ಸಂಗತಿಗಳನ್ನು ನಂಬಿ, ಅದನ್ನು ಎಲ್ಲರ ನಡುವೆ ಪ್ರಚಾರ ಮಾಡುವರು ಎಂಬುದನ್ನು ಕಲಿಯುತ್ತೇವೆ. ಆ ನಕರಾತ್ಮಕವಾದ ವಿಚಾರಗಳನ್ನು ಪೌಲನು ಸಮಾನಾಂತರದಲ್ಲಿಟ್ಟಿದ್ದನು, ಸಭೆಯ ಸೌಹಾರ್ದಕ್ಕಾಗಿ ಪೌಲನು ಜನರು ಬಯಸುವ ಎಲ್ಲಾ ಕ್ರಿಯೆಗಳನ್ನು ಮಾಡಲು ಸಿದ್ಧನಾಗಿದ್ದನು, ಸಭೆಯು ಅಪರಿಪೂರ್ಣವಾಗಿದ್ದರೂ, ಪೌಲನು ಅದನ್ನು ಪ್ರೀತಿಸಿದ ಪಾಠವನ್ನು ನಾವು ಕಲಿಯಬಹುದು.

ಸಲಹೆಯನ್ನು ಹೇಳುವ ಹಾಗೂ ಸ್ವೀಕರಿಸುವ ಪಾಠವನ್ನು ಕಲಿಯಬಹುದು: ನಾವು ಮಾರ್ಗದರ್ಶನ ನೀಡುವಾಗ ಎಚ್ಚರವಾಗಿರಬೇಕು; ಇತರರ ಜೀವಿತಕ್ಕೆ ಮಾರ್ಗದರ್ಶನ ನೀಡುವದು ಸರಳ ಏಕೆಂದರೆ ಅದು ನಮ್ಮ ಜೀವಿತವಲ್ಲ. ಒಂದು ವೇಳೆ ಹಿರಿಯರು ಪೌಲನಿಗೆ ಒತ್ತಾಯ ಮಾಡಿ ಸಲಹೆ ನೀಡಿರಬಹುದು. ಅದರ ಕುರಿತು ಪರಿತಾಪ ಪಟ್ಟಿರುವ ಸಾಧ್ಯತೆಗಳಿರುವದಿಲ್ಲ. ಮುಂದಿನ ಐದು ವರ್ಷಗಳಲ್ಲಿ ಅವರಲ್ಲಿ ಯಾರಾದರೂ, "ನಾವು ಪೌಲನಿಗೆ ಇದನ್ನು ಮಾಡದಿದ್ದರೆ, ಪೌಲನು ಸೆರೆಮನೆಯಲ್ಲಿರುವ ಸಾಧ್ಯತೆ ಇರಲಿಲ್ಲ." ಮತ್ತು ಅವನು ಸುವಾರ್ತೆ ಸಾರಲು ಸಾಧ್ಯವಿರಲಿಲ್ಲ, ಎಂದು ಹೇಳಿದರೆ? ಮತ್ತು ಇತರರ ಸಲಹೆಗಳನ್ನು ಸ್ವೀಕರಿಸುವದರಲ್ಲೂ ನಾವು ಎಚ್ಚರವುಳ್ಳವರಾಗಿರಬೇಕು. ಸಕಲರ ಸಲಹೆಗಳನ್ನು ಸರಿಯಾದ ರೀತಿಯಲ್ಲಿ ಪರಿಶೀಲಿಸಬೇಕು: ಅದರಲ್ಲಿರುವ ದೇವರ ಪ್ರೇರಿತ ಸತ್ಯ ಹಾಗೂ ಅದರಿಂದಾಗುವ ಪರಿಣಾಮಗಳನ್ನು ಸಮತೋಲನದಲ್ಲಿಡಬೇಕು.

ಪ್ರಾಯಶಃ ಈ ಪಾಠದಲ್ಲಿ ಪ್ರಮುಖವಾಗಿ, ದೇವರ ವಿವೇಚನೆ ಹಾಗೂ ದೇವರ ಕೃಪೆಯ ಬಗ್ಗೆ ಪಾಠವನ್ನು ಕಲಿಯಬಹುದು. ಒಂದು ವೇಳೆ ಪೌಲನು ತಪ್ಪುಮಾಡಿದ್ದರು, ಈ ಸನ್ನಿವೇಶದ ಮೂಲಕ ದೇವರು ತಮ್ಮ ಉದ್ದೇಶವನ್ನು ಈಡೇರಿಸಿದನು. ಯೆರೂಸಲೇಮಿನಲ್ಲಿ ಪೌಲನಿಗೆ ಬೇಡಿ ಉಂಟಾಗುವದು ಎಂಬ ಪ್ರವಾದನೆಯ ನೆರವೇರಿಕೆಯ ಕುರಿತು ಮುಂದೆ ನೋಡುತ್ತೇವೆ (20:22, 23). ಗಣನೀಯವಾದ ಘಟನಾವಳಿಗಳ ಮೂಲಕವಾಗಿ ಪೌಲನು ರೋಮಾಯಕ್ಕೆ ಹೋದನು. ಎಲ್ಲಿಯವರೆಗೆ ದೇವರ ದೃಷ್ಟಿಯಲ್ಲಿ ನಿರ್ಮಲರೂ, ನಿರ್ದೋಷಿಗಳೂ ಆಗಿರುವೆವು, ನಮ್ಮ ನಿರ್ಣಯಗಳು ತಪ್ಪಾಗಿದ್ದರೂ, ದೇವರು ತನ್ನ ಕಾರ್ಯವನ್ನು ನಮ್ಮ ಜೀವಿತದಲ್ಲಿ ಈಡೇರಿಸಿಕೊಳ್ಳುವನು. ನಾನು ಎಷ್ಟು ತಪ್ಪಾದ ನಿರ್ಣಯಗಳನ್ನು ಮಾಡಿದ್ದಾಗ್ಯೂ, ನಾನು ಕೃಪಾಪೂರ್ಣನಾದ ದೇವರಿಗೆ ಸೇವೆ ಮಾಡುತ್ತಿರುವೆನು. ದೇವರಿಗೆ ಸ್ತೋತ್ರ!

---

ಟಿಪ್ಪಣಿಗಳು

[1]*ಅಪೊಸ್ತಲರ ಕೃತ್ಯಗಳು, 2ನೇ* ಪುಸ್ತಕದ 15ರಲ್ಲಿರುವಂತೆ, ಗಲಾತ್ಯ ಪತ್ರಿಕೆಯ ಕಾಲವು ತಿಳಿದಿರುವದಿಲ್ಲ. ಪೌಲನ ಮೂರನೇ ಪ್ರಯಾಣದ ಅಂತ್ಯದಲ್ಲಿರಬಹುದು. [2]*ಅಪೊಸ್ತಲರ ಕೃತ್ಯಗಳು, 4ನೇ* ಪುಸ್ತಕದ "ಬಡವರನ್ನು ನೆನಪುಮಾಡಿರಿ" ಎಂಬುದರಲ್ಲಿ ಉಲ್ಲೇಖಿಸಿರುವಂತೆ ಮೂರನೇ ಪ್ರಯಾಣದ ಅಂತ್ಯದಲ್ಲಿ ರೋಮಾಯರ ಪುಸ್ತಕ ಬರೆಯಲ್ಪಟ್ಟಿರಬಹುದು. [3]ಅರಣ್ಯಕಾಂಡ 6:11, 14 ನಾಲ್ವರು ವ್ರತವನ್ನು ಹಿಡಿದಿದ್ದರು. ಶುದ್ಧಿಕರಣದ ನಂತರ ಪಾಪಪರಿಹಾರಕ ಯಜ್ಞ ನಂತರದಲ್ಲಿ ಇನ್ನೊಂದು ಪಾಪ ಪರಿಹಾರ ಯಜ್ಞದ ಅಗತ್ಯತೆಯಿತು. ಪ್ರತಿಯೊಬ್ಬನಿಗೂ ಎರಡೆರಡರಂತೆ ಒಟ್ಟು ಎಂಟು ಯಜ್ಞಗಳು. [4]Adam Clarke, *The Holy Bible With a Commentary and Critical Notes,* vol. 5, *Matthew-Acts* (New York: Abingdon Press, n.d.), 860. [5]ಜಾನ್ ಕ್ಯಾಲ್ವಿನ್‌ನು "ಸುಧಾರಕ" ನಾಗಿದ್ದರಿಂದ ಜೀವನ ಪರ್ಯಾಂತರ ಕ್ಯಾಥೋಲಿಕರ ವಿರೋಧವನ್ನು ಎದುರಿಸಿದನು. [6]ರಿಚರ್ಡ್ ಲಾಂಗೆನ್‌ಕರ್. ಎರಡು ಉಪನ್ಯಾಸ, ಪೌಲನು ಮಾಡಿದ್ದು ಸರಿ, ಎಂಬುದು, ಇನ್ನೆಂದೂ ಪೌಲನ ಮಾಡದ್ದು ತಪ್ಪು ಎಂಬುದು, *Paul, Apostle of Liberty* (New York: Harper & Row, 1964), 246. [7]G. Campbell Morgan, *The Acts of the Apostles* (Grand Rapids, Mich.: Fleming H. Revell, 1988), 372. [8]1989ರ ಉಪವಾಸ (*Acts, The Spreading Flame* [Searcy, Ark.: Harding University, 1989]). [9]*ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ "ಯೆರೂಸಲೇಮಿನಲ್ಲಿ ಪ್ರಾರಂಭ" ಎಂಬ ಪಾಠದಲ್ಲಿರುವ ಪೆಂಥಕೋಸ್ಥ ಹಬ್ಬವು ವಾರದ ಮೊದಲನೆಯ ದಿನದಂದು ಬಂದದ್ದರಿಂದ (ಅಪೊಸ್ತಲರ ಕೃತ್ಯಗಳು 2:1ರ ಮೇಲಿರುವ ಸೂಚನೆಗಳಲ್ಲಿ ನೀಡಲಾಗಿದೆ) ಕ್ರೈಸ್ತರು ರೊಟ್ಟಿ ಮುರಿಯಲು ಆ ದಿನದಂದು ಸೇರಿದರು (ಅಪೊಸ್ತಲರ ಕೃತ್ಯಗಳು 20:7ರ ಮೇಲಿರು ಸೂಚನೆಗಳನ್ನು *ಅಪೊಸ್ತಲರ ಕೃತ್ಯಗಳು, 4ನೇ* ಪುಸ್ತಕದಲ್ಲಿ "ನಿದ್ರಿಸುವ ಶಿಷ್ಯರು" ಎಂಬ ಪಾಠದಲ್ಲಿ ನೋಡಿ). ಮುಕ್ತಾಯವಾಗಿ ಆದ್ದರಿಂದ, ಪೆಂಥಕೊಸ್ಥ ದಿನಕ್ಕೆ ಮುಂಚಿತವಾಗಿ ಪೌಲನು ಅಲ್ಲಿ ಬಂದಿರಬಹುದೆಂದು ಹೇಳಬಹುದು. [10]ವಚನ 17 ಯಾಕೋಬನ ಮನೆಯಲ್ಲಿನ ಪ್ರಥಮ ಸಭೆ ವಚನ 18ರಲಿಲ ಹಿರಿಯರು ನಡೆಸಿದ ಎರಡನೆಯ ಸಭೆ.

[11]"ಬಡವರನ್ನು ನೆನಪು" ಮಾಡಿರಿ ಎಂದು ಹೇಳಿದ ಯಾಕೋಬನು ಮಾತ್ರ ಯೆರೂಸಲೇಮಿನಲ್ಲಿ ಉಳಿದಿದ್ದನು (ಗಲಾತ್ಯ 2:9, 10). ಪೌಲನು ತಾನು ಸಂಗ್ರಹಿಸಿದ್ದ ಕಾಣಿಕೆಯನ್ನು ಯಾಕೋಬನಿಗೆ ನೀಡಿರಬಹುದು. [12]ಅವನು ಯೇಸುವಿನ ಸಹೋದರನಾಗಿದ್ದು, ಜೀವಿತದ ಅಂತ್ಯದಲ್ಲಿದ್ದನು, ಪ್ರಸಿದ್ಧಿಪಡೆದನು ಯೋಹಾನನ ಸಹೋದರನಾದ ಯಾಕೋಬನು, ಅಧ್ಯಾಯ 12ರಲ್ಲಿ ಅವನನ್ನು ಕೊಂದರು. [13]ಪೌಲನ ರೋಮಾಯದ ಪ್ರಯಾಣದ ಮೊದಲು ಲೂಕನು ಮೊದಲ ವ್ಯಕ್ತಿತ್ವವನ್ನು ಬಳಸಿರುವನು (27:1), ಪೌಲನ ಮೇಲೆ ದೃಷ್ಟಿ ಇರಬೇಕೆಂದು ಲೂಕನು ಮಾಡಿರಬಹುದು. ಹೇಗೂ ಲೂಕನು ಪೌಲನೊಂದಿಗೆ ಪ್ರಯಾಣಿಸಿ, ಎರಡು ವರ್ಷಕ್ಕಿಂತ ಅಧಿಕವಾಗಿ ಪಾಲಿಸ್ತೆನಿನಲ್ಲಿ ಇರಬಹುದು, ಆಗ ಪೌಲನು ಕೈಸರೈಯ ಸೆರೆಮನೆಯಲ್ಲಿದ್ದನು. ಈ ಸಮಯದಲ್ಲಿಯೇ ಲೂಕನು ಯೇಸುವಿನ ಜೀವನ ಚರಿತ್ರೆ ಹಾಗೂ ಸಭಾ ಚರಿತ್ರೆಯನ್ನು ಬರೆದಿರಬಹುದು (ಲೂಕ 1:3). [14]ಆದಿ ಅಪೊಸ್ತಲರು ಪ್ರಯಾಣಮಾಡಿ, ಸುವಾರ್ತೆಯನ್ನು ಸಾರಿ, ಸಭೆಗಳನ್ನು ಸ್ಥಾಪಿಸುತ್ತಿದ್ದರು ಅದು ಅವರ ಸಂಪ್ರದಾಯವಾಗಿತ್ತು. [15]A. C. Hervey, *The Acts of the Apostles (2)*, The Pulpit Commentary, vol. 18 (Grand Rapids, Mich.: Wm. B. Eerdmans Publishing Co., 1950), 172. ಇದೇ ತರದ ಶೀರ್ಷಿಕೆಯನ್ನು ಕೂಡ ನೋಡಿ ಕ್ಲಾರ್ಕ್ 859. [16]"ಯಾಕೋಬ" ಮತ್ತು ಹಿರಿಯರು ಎಂಬ ನಡುವಿನ ವ್ಯಾಖ್ಯಾನದಲ್ಲಿ ಜಾಗ ಬಿಟ್ಟಿರುವದನ್ನು ಗಮನಿಸಿ ಮೂಲ ಭಾಷೆ ಹಾಗೂ ಇಂಗ್ಲೀಷ್ ಭಾಷೆಯಲ್ಲು "ಕೋಮವನ್ನು" ಬಳಸಲಾಗಿದೆ. [17]Mark Black, "The Vow and the Sacrifices," *Acts, The Spreading Flame*, 221. (ಒತ್ತಿ ಹೇಳಿದ್ದು ನನ್ನದು.) [18]ಹಿರಿಯರೆಲ್ಲರೂ ಸೇರಿ ಬರುವದು, ಯಾಕೋಬನ ಅಥವಾ ಪೌಲನ ಯೋಚನೆಯೇ? ಅವರಿಬ್ಬರೂ ಇದನ್ನು ಬಯಸಿರಬಹುದು; ಕಾಣಿಕೆಯನ್ನು ನೀಡುವ ಸಮಯದಲ್ಲಿ, ಎಲ್ಲರೂ ಇರಬೇಕೆಂದು ಪೌಲನು ಬಯಸಿರಬಹುದು, ಪೌಲನು ಆ "ನಾಲ್ವರ" ವೆಚ್ಚವನ್ನು ನೀಡಬೇಕೆಂಬ ವಿಷಯಕ್ಕೆ ಅವರೆಲ್ಲರೂ ಸಾಕ್ಷಿಗಳಾಗಿರಬೇಕೆಂದು ಯಾಕೋಬನು ಅವರನ್ನು ಕರೆಸಿ ರಬಹುದು. [19]ಅವನಲ್ಲಿ ಇತರೆ ಉದ್ದೇಶವೂ ಇರಬಹುದು; ಪೌಲನ ಬೇಡಿಕೆಯ ಹಿನ್ನೆಲೆಯನ್ನು ಅವರುಗಳು ಅರಿಯಬೇಕಿತ್ತು. [20]ಯೆಹೂದ್ಯ ಮತ್ತು ಅನ್ಯರ ಸಂಬಂಧ ಸುಧಾರಿಸಿತು ಎಂಬದನ್ನು ಅರಿಯೆವು, ಪೌಲನ ಉದ್ದೇಶವು ಈಡೇರದೇ ಇದ್ದದ್ದರಿಂದ, ಕಾಣಿಕೆಯ ಕುರಿತು ಲೂಕನು ಉಲ್ಲೇಖಿಸಿರುವದಿಲ್ಲ. ಆದ್ದರಿಂದ ಅದು ಯಶಸ್ವಿಯಾಗದೇ ಇರಬಹುದು, ಈ ಕಾರಣದಿಂದ ಪೌಲನ ಇತರೆ ಪತ್ರಿಕೆ ಗಳು ಯಶಸ್ವಿಯಾಗಲಿಲ್ಲ, ಯಾಕೆಂದರೆ ಲೂಕನು ಅದನ್ನು ತಿಳಿದಿರುವದಿಲ್ಲ, ಉದ್ದೇಶ ವನ್ನು ಈಡೇರಿಸಿದ ವಿಷಯವನ್ನು ಮಾತ್ರ ತಿಳಿಸಿ, ಯಶಸ್ವಿಯಾಗದ ಉದ್ದೇಶಗಳನ್ನು

ಉಲ್ಲೇಖಿಸಿರುವದಿಲ್ಲ.

[21]ಯೆರೂಸಲೇಮಿನ ಹಿರಿಯರಿಗೆ ಪೌಲನು ವರದಿಯನ್ನು ಸಲ್ಲಿಸಿದ್ದರಿಂದ (15:4), ಅದರಲ್ಲಿ ಎರಡು ಮತ್ತು ಮೂರನೇ ಪ್ರಯಾಣದ ವಿವರವು ಅಡಕವಾಗಿರಬಹುದು 18:22 ಅಥವಾ ಮೂರನೇ ಪ್ರಯಾಣದ ಸುದ್ದಿ ಮಾತ್ರವಾಗಿರಬಹುದು. [22]ಗ್ರೀಕ್‌ನಲ್ಲಿ "ಸಾವಿರಾರು." [23]ಯೆರೂಸಲೇಮಿನ ಹಿರಿಯರ ಕುರಿತ ವರದಿ ಇರಬಹದು, ಯೆರೂಸಲೇಮಿನ ಹಬ್ಬಕ್ಕೆ ಬಂದ ಯೆಹೂದ್ಯರ ಲೆಕ್ಕವಿರಬಹುದು. [24]ಹಿರಿಯರು ದೇವರನ್ನು ಮಹಿಮೆ ಪಡಿಸಿದರು ಎಂಬ ಅನೇಕ ಅನುವಾದಗಳಿವೆ, ಪೌಲನ ವರದಿಯಲ್ಲಿ ಅವರು ಹೆಚ್ಚು ಆಸಕ್ತಿ ವಹಿಸಲಿಲ್ಲ, ಅವರು ಗುಪ್ತವಾದ ಯೋಜನೆಯಿಂದ ಅಲ್ಲಿ ಸೇರಿ ದ್ದರು. [25]Quoted in Herbert V. Prochnow and Herbert V. Prochnow, Jr., *A Dictionary of Wit, Wisdom, & Satire* (New York: Popular Library, 1964), 116. [26]"ಅವರಿಗೆ ತಿಳಿದಿತ್ತು" ಎಂಬುದು "ಕೇಟ್ ಚೀಸ್" ಎಂಬ ಗ್ರೀಕ್ ಪದವಾಗಿದೆ, ವದಂತಿಯು ಜನರ ಮಾತನ್ನು ಕೆಡಿಸಿತು. ಪ್ರಸಂಗಿಗಳಿಗೂ ಅವರು ಹೇಳದೆ ಇರುವ ವಿಷಯ ಕುರಿತು ವದಂತಿಗಳನ್ನು ಜನರು ಮಾಡುತ್ತಾರೆ. [27]ಪೌಲನು ಹೇಳಿರ ಬಹುದೆಂಬ ವದಂತಿ, ವಿನಃ ಅವನು ಹೇಳಿದ ಸತ್ಯದ ಬಗ್ಗೆ ಆಗಿರಲಿಲ್ಲ. [28]"ಒಂದು ಹೊಸದಾದ ತಂಡ - ಮತ್ತು ಹೆಚ್ಚಿನವರು" ಎಂಬ ಪಾಠದಲ್ಲಿ, 16:1-5ರ ಟಿಪ್ಪಣಿಯನ್ನು *ಅಪೊಸ್ತಲರ ಕೃತ್ಯಗಳು, 3ನೇ* ಪುಸ್ತಕದಲ್ಲಿ ನೋಡಿರಿ. [29]*ಅಪೊಸ್ತಲರ ಕೃತ್ಯಗಳು, 3ನೇ* ಪುಸ್ತಕ "ಒಂದು ಹೊಸದಾದ ತಂಡ - ಮತ್ತು ಹೆಚ್ಚಿನವರು" ಎಂಬ ಪಾಠದಲ್ಲಿ ಈ 16:3 ಟಿಪ್ಪಣಿ ನೋಡಿರಿ. [30]ವದಂತಿ ತಪ್ಪಾಗಿದ್ದರೂ, ಅದು ಅಪಾಯಕರವಾಗಿತ್ತು. ಸ್ತೆಫನನಿಗೂ ಇದೆ ವಿಧವಾಗಿ ಉಂಟಾಯಿತು (6:14). ಅವನ ಮರಣಕ್ಕೆ ಕಾರಣನಾಗಿದ್ದನು.

[31]ವೆಸ್ಟರ್ನ್ ಟೆಕ್ಸ್ಟ್‌ನಲ್ಲಿ "ನಂತರ ಏನು"? ಎಂಬುದಾಗಿದೆ. ಸಮೂಹವಾಗಿ ಬಂದರು. ಕೆಲವರು ಅದನ್ನು "ಅನ್ಯರ ಸಮೂಹ" ಎಂದು ತಿಳಿಯುವರು. [32]*ಅಪೊಸ್ತಲರ ಕೃತ್ಯಗಳು, 4ನೇ* ಪುಸ್ತಕದಲ್ಲಿ 20:7ರ ಟಿಪ್ಪಣಿ. [33]ಆ ನಿರ್ಣಯದ ಮೊದಲು ಅವರು ಪೌಲನೊಂದಿಗೆ ಚರ್ಚಿಸಬಹುದಿತ್ತು. [34]Quoted in James Burton Coffman, *Commentary on Acts* (Austin, Tex.: Firm Foundation Publishing House, 1976), 408. [35]Lloyd J. Ogilvie, *The Communicator's Commentary*, vol. 5, *Acts* (Dallas: Word Publishing, 1983), 304. [36]ಗ್ರಿಕ್‌ನ ನಾಮಪದವು ಆಜ್ಞಾಪಿಸುವ ರೂಪವಾಗಿದೆ. [37]ಹಿರಿಯರೇ ಆ ನಾಲ್ವರನ್ನು ಸಭೆಗೆ ಕರೆ ತಂದಿರಬಹುದು (ವಚನ 26). [38]18:18ರ ಪೌಲನ ಪ್ರತಿಜ್ಞೆಗೆ ಹೋಲಿಸಿರಿ, ಅರಣ್ಯಕಾಂಡ 6:18ರ ಪ್ರಕಾರ ವ್ರತದ ಅಂತ್ಯದಲ್ಲಿ ಬೋಳಿಸಿಕೊಳ್ಳುತ್ತಿದ್ದರು ಆ ನಾಲ್ವರು ಖಂಡಿತವಾಗಿ ನಾಜೀರರ ವ್ರತವನ್ನು ಕೈಗೊಂಡಿದ್ದರು. [39]ಸಂಸೋನನು ಮತ್ತು ಸ್ನಾನಿಕನಾದ ಯೋಹಾನನೂ ನಾಜೀರರಾಗಿದ್ದರು. [40]ಕಾಣಿಕೆಯಲ್ಲಿ ಅಲ್ಪ ಭಾಗವನ್ನು ಆ ವ್ರತ್ತಕ್ಕಾಗಿ ಬಳಸು ಎಂದು ಹಿರಿಯರು ಪೌಲನಿಗೆ ಹೇಳಿರಬಹುದು. ಆ ವಿಧದ ಕಾರ್ಯವು ಹಣದ ದುರುಪಯೋಗದ ಕಾರ್ಯವಾಗಿದ್ದರಿಂದ, ಪೌಲನು ಒಪ್ಪಿರಲಾರನು (2 ಕೊರಿಂಥ 8:20, 21). ನಂತರದಲ್ಲಿ ಪೌಲನು ಬಾಡಿಗೆ ಹಣ ನೀಡಿ ಎರಡು ವರ್ಷಗಳ ಕಾಲ ಬಾಡಿಗೆ ಮನೆಯಲ್ಲಿದ್ದನು (ಅಪೊಸ್ತಲರ ಕೃತ್ಯಗಳು 28:30). ಈ ಸಮಯದಲ್ಲಿ ಪೌಲನು ತನ್ನ ಆಸ್ತಿಯ ಪಾಲನ್ನು ಹೊಂದಿರಬಹುದು ಎಂಬುದು ಕೆಲವರ ಅಭಿಪ್ರಾಯ. ಅವನು ಕೆಲಸ ಮಾಡಿ ಅಥವಾ ಅವನ ಸಹೋದರರು ಉದಾರವಾಗಿ ಹಣವನ್ನು ನೀಡಿರಬಹುದು.

[41]ಪೌಲನ ವ್ರತವನ್ನು ಅರಣ್ಯಕಾಂಡ 15:1-30ಕ್ಕೆ ಹೋಲಿಸಿರಿ. ಪೌಲನು ಆ ನಾಲ್ವರೊಂದಿಗೆ ವ್ರತ ಕೈಗೊಂಡನು ಎಂಬುದಾಗಿರುವದಿಲ್ಲ (18:18) ಪ್ರಕಾರ ಅವನು ಈ ಹಿಂದೆ ಮಾಡಿದ ಪ್ರತಿಜ್ಞೆಯನ್ನು ಈಡೇರಿಸುವದಕ್ಕಿದ್ದನು. ಯೆಹೂದ್ಯರು ಅನ್ಯರ ಪ್ರದೇಶದಿಂದ ಹಿಂದಿರುಗುವಾಗ ಈ ವ್ರತವನ್ನು ಕೈಗೊಳ್ಳುತ್ತಿದ್ದರು ಪೌಲನಲ್ಲೂ ಇದೇ ವಿಧದ ಸಂಗಟನೆಯು ನಡೆದಿರಬಹುದು, ಇದು ಆ ದಿವಸಗಳ ಅಗತ್ಯತೆ ಇರಬಹುದು. [42]ಯಥಾಪ್ರಕಾರದಂತೆ, ಲೂಕನು ಈ ವಿಷಯವನ್ನು ಸಂಕ್ಷಿಪ್ತಗೊಳಿಸಿರುವದರಿಂದ ಆ ವಿಚಾರದ ವಿವರಣೆ ಇರುವದಿಲ್ಲ. ಆ ನಾಲ್ವರ ವಿವರದ ಉದ್ದೇಶವನ್ನು ಹೊಂದದೆ, ಪೌಲನು ರೋಮಾಯಕ್ಕೆ ತಲುಪಿದ ಸಂಗತಿಯನ್ನು ತಿಳಿಸಿರುವನು. [43]ಪೇತ್ರನ ಹೇಳಿಕೆಯನ್ನು ನೀಡುವಾಗ (15:13) ಯಾಕೋಬನು ಅಲ್ಲಿದ್ದನು; ಹಿರಿಯರು ಇದನ್ನು ಅರಿತಿದ್ದರು. [44]*ಅಪೊಸ್ತಲರ ಕೃತ್ಯಗಳು, 3ನೇ* ಪುಸ್ತಕದಲ್ಲಿರು "ಭಿನ್ನಾಭಿಪ್ರಾಯಗಳನ್ನು ಶಮನ ಮಾಡುವದಕ್ಕಾಗಿ ಹೆಚ್ಚಿನ ಸಲಹೆಗಳು" ಎಂಬ ಪಾಠದಲ್ಲಿ 15:20ರ ಟಿಪ್ಪಣಿಯನ್ನು ನೋಡಿರಿ. [45]ಮುಂದಿನ ಪಾಠದಲ್ಲಿರುವ "ಯುದಾಯರ" ಕುರಿತು ನೋಡಿರಿ. [46]ಮುಂದಿನ ಪಾಠಗಳಲ್ಲಿ ಯೆರೂಸಲೇಮಿನ ಯೆಹೂದ್ಯರಿಗೂ, ನಾಯಕರಿಗೂ ಪೌಲನು ಪ್ರಸಂಗ ಮಾಡಿದಾಗ ಅವರು ಕೆರಳಿದರು. ಸಹಜವಾಗಿ ಯೆಹೂದ್ಯ ಕ್ರೈಸ್ತರು ಈ ವಿಧವಾಗಿ ಪ್ರಸಂಗ ಮಾಡುತ್ತಿರಲಿಲ್ಲ. [47]1 ಕೊರಿಂಥ 9:20 ನೋಡಿರಿ. [48]ಹಿರಿಯರ ಸಲಹೆಯ ಮೇರೆಗೆ ಜನರು ಸಭೆ ಸೇರಿರಬಹುದು. [49]"ದೇವಾಲಯ" ಅಂದರೆ ಆಲಯಕ್ಕೆ ಸಬಂಧಪಟ್ಟ ವಸ್ತುಗಳು,

ದೇವಾಲಯದ ಆವರಣವಲ್ಲ, ಅದರಲ್ಲಿ ಅನ್ಯರ ಅಂಗಳ ಅಡಕವಾಗಿತ್ತು. [50]ಆಸ್ಪದ ಯೆಹೂದ್ಯರು ವಿಮೋಚನಕಾಂಡ 15:1-30, ಏಳನೇ ದಿವಸದ ಅಂತ್ಯದಲ್ಲಿ ಪೌಲನನ್ನು ಹಿಡಿದರು, ಹಿರಿಯರನ್ನು ಸಂಧಿಸಿದ ಮತ್ತು ಅವನು ಹಿಡಿಯಲ್ಪಟ್ಟ ವಿಷಯದ ನಡುವಿನ ಸಮಯದಲ್ಲಿ, ವಾರದ ಮೊದಲನೆಯ ದಿವಸ ಇರಬಹುದು, ಇದರಲ್ಲಿ ಬಯಸುವ ಸೂಕ್ತ ಉತ್ತರವನ್ನು ಲೂಕನು ನೀಡಿರುವದಿಲ್ಲ.

[51]ಏಳನೇ ದಿನದ ಅಂತದ ಸಮೀಪದಲ್ಲಿ ಆಷಿಯಾದಲ್ಲಿರುವ ಯೂದಾಯರು ಪೌಲನನ್ನು ಹಿಡಿತಂದದ್ದರಿಂದ ವಾರದ ಮೊದಲನೆಯ ದಿನದಂದು ಪೌಲನು ಹಿರಿಯರೊಂದಿಗೆ ಬೇಟಿ ಮಾಡಿದ ಮತ್ತು ಆತನನ್ನು ಹಿಡಿತಂದ ಸಮಯದ ಮದ್ಯದಲ್ಲಿ ಯೆರೂಸಲೇಮಿನಲ್ಲಿ ಸಭೆಯಾಗಿ ಸೇರಿರಬಹುದು. ಆ ಸಭೆಯಲ್ಲಿ ಏನು ನಡೆಯಿತು? ಕಾರಣವೇನಾದರು ಇತ್ತೇ? ನಾವು ತಿಳಿದಿಕೊಳ್ಳಲು ಬಯಸುತ್ತೇವೆ - ಆದರೆ ನಮ್ಮ ಕೂತುಹಲವನ್ನು ಸಂತೃಪ್ತಿಗೊಳಿಸಲು ಲೂಕನ ಉದ್ದೇಶವಲ್ಲ.